ಸಂಚಾರತ್ವೇನ ವಿದ್ವಾಂಸರಿಂದ ಅತ್ಯಂತ ಪ್ರಸಿದ್ಧವಾಗಿದ್ದ ಪೂಣಾಪಟ್ಟಣಕ್ಕೆ ಶ್ರೀಗಳು ದಯಮಾಡಿಸಿದ್ದಂತಹ ಸಂದರ್ಭದಲ್ಲಿ ಪೇಶ್ವೆಯ ಆಸ್ಥಾನವಿದ್ವಾಂಸನಾದ ರಾಮಾಶಾಸ್ತ್ರಿಯೆಂಬ ಅನ್ಯಮತಾನುಯಾಯಿಯಾದಂತಹ ವಿದ್ವಾಂಸನೊಂದಿಗೆ ವಾಕ್ಯಾರ್ಥ ನಡೆಸಿ, ಆತನನ್ನು ಪರಾಭವಗೊಳಿಸಿದರು. ಶ್ರೀಗಳ ವಿದ್ಯಾವೈಭವದಿಂದು ಪರಾಜಿತನಾದ ಆತ ತನ್ನ ಮನೆಯನ್ನೇ ಶ್ರೀಗಳಿಗೆ ಒಪ್ಪಿಸಿದ. ಅದ್ಯಪಿ ಶ್ರೀ ವರದೇಂದ್ರತೀರ್ಥರ ಬೃಂದಾವನವು ಆ ವಿದ್ವಾಂಸ ಒಪ್ಪಿಸಿದಂತಹ ಮನೆಯಲ್ಲಿಯೇ ಇದೆ ಎಂಬುದು ವಿಶೇಷ. ಶ್ರೀ ವರದೇಂದ್ರತೀರ್ಥರು ತಾವು ಬೃಂದಾವನಸ್ಥರಾದ ಮೇಲೆಯೂ ತಮ್ಮ ಶಿಷ್ಯರಾದ ಲಿಂಗಸುಗೂರಿನ ಶ್ರೀಪ್ರಾಣೇಶದಾಸರಲ್ಲಿ ವಿಶೇಷವಾದಂತಹ ಅನುಗ್ರಹವನ್ನು ಮಾಡಿದರು.

www.bhargavasarma.blogspot.com

ಹಿಂದೆ ತಾವು ಪ್ರಾಣೇಶದಾಸರಿಂದ ಗುರುಕಾಣಿಕೆಯ ರೂಪದಲ್ಲಿ ಸ್ವೀಕರಿಸಿದ್ದ ಹುಲ್ಲಿನ ಬಣವೆಯ ಬಳಿ ತಮ್ಮ ಸನ್ನಿಧಾನವಿರುವುದೆಂದು " ದಾಸರೇ ನಾವು ತುಲಸಿವೃಕ್ಷರೂಪಿನಿಂದ ನಿಮ್ಮಲ್ಲಿಗೆ ಬಂದಿದ್ದೇವೆ.ನಿಮ್ಮೂರಹತ್ತಿರ ಪೂರ್ವಕ್ಕಿರುವ ಗುಲಗುಂಜೀ ಮರದಿಯಶಿಲೆಯಿಂದವೃಂದಾವನಸಿದ್ಧಪಡಿಸಿ ಸ್ಥಾಪಿಸಿ, ಪೂಜಿಸಿ"ಎಂಬುದಾಗಿ ಸ್ವಪ್ನ ಮುಖೇನ ಸೂಚಿಸಿದರು. ಅದರಂತೆಯೇ ಶ್ರೀಗಳ ಪರಮಾಪ್ತ ಶಿಷ್ಯರಾಗಿದ್ದ ಶ್ರೀಪ್ರಾಣೇಶದಾಸರು ಸುಂದರವಾದಂತಹ ಬೃಂದಾವನವನ್ನು ಸ್ಥಾಪಿಸಿದರು. ಲಿಂಗಸುಗೂರಿನಲ್ಲಿಯೂ ತಮ್ಮ ಸಾನ್ನಿಧ್ಯವನ್ನು ಪ್ರಕಟಗೊಳಿಸಿ, ಲಿಂಗಸುಗೂರಿನ ವರದೇಂದ್ರಸಾಹಿತ್ಯಮಂಡಲದ ಮೂಲಕ ಹರಿದಾಸಸಾಹಿತ್ಯದ ವಿಶೇಷವಾದಂತಹ ಕಾರ್ಯ ನಡೆಯುವಂತೆ ಪ್ರೇರಣೆ ನೀಡಿದ ಶ್ರೀವರದೇಂದ್ರರ ಆರಾಧನೆ ಆಷಾಡ ಶುದ್ಧ ಷಷ್ಠೀ. ಪ್ರೀತೋSಸ್ತು ಕೃಷ್ಣಪ್ರಭುಃ - ವಾದೇ ವಿಜಯಶೀಲಾಯ ವರದಾಯ ವರಾರ್ಥಿನಾಂ| ವದಾನ್ಯಜನಸಿಂಹಾಯ ವರದೇಂದ್ರಾಯ ತೇ ನಮಃ|

ಶ್ರೀವರದೇಂದ್ರತೀರ್ಥರು ಶ್ರೀ ರಾಯರ ಉಭಯ ವಂಶಾಬ್ಧಿ ಚಂದ್ರಮರು.

ಇವರು ಶ್ರೀ ರಾಯರ ಪೂರ್ವಾಶ್ರಮ ಪುತ್ರರಾದ ಶ್ರೀ ಲಕ್ಷ್ಮೀನಾರಾಯಣಾಚಾರ್ಯರ ಮಕ್ಕಳಾದ ಶ್ರೀ ಪುರುಷೋತ್ತಮಾಚಾರ್ಯರಿ ಗೆ ಶ್ರೀ ಶ್ರೀನಿವಾಸಾಚಾರ್ಯರು ಮತ್ತು ಶ್ರೀ ವೇಣುಗೋಪಾಲಾಚಾರ್ಯ ಪುತ್ರರು. ಶ್ರೀ ಶ್ರೀನಿವಾಸಾಚಾರ್ಯರೇ ಶ್ರೀ ವಾದೀಂದ್ರತೀರ್ಥರು.

ಶ್ರೀ ವೇಣುಗೋಪಾಲಾಚಾರ್ಯರಿಗೆ ಶ್ರೀ ಪುರುಷೋತ್ತಮಾಚಾರ್ಯರು - ಶ್ರೀ ಬಲರಾಮಾಚಾರ್ಯರು (ಶ್ರೀ ಜಗನ್ನಾಥದಾಸರ ವಿದ್ಯಾ ಗುರುಗಳು) ಮತ್ತು ಶ್ರೀ ಲಕ್ಷ್ಮೀನಾರಾಯಣಾಚಾರ್ಯರು. ಇವರುಗಳೂ ಶ್ರೀ ರಾಯರ ಮರಿ ಮಕ್ಕಳು)

ಶ್ರೀ ಪುರುಷೋತ್ತಮಾಚಾರ್ಯರು (ಶ್ರೀ ವಸುಧೇಂದ್ರತೀರ್ಥರು)
ಶ್ರೀ ಬಲರಾಮಾಚಾರ್ಯರು (ಶ್ರೀ ವರದೇಂದ್ರತೀರ್ಥರು)
ಶ್ರೀ ಲಕ್ಷ್ಮೀನಾರಾಯಣಾಚಾರ್ಯರು (ಶ್ರೀ ಭುವನೇಂದ್ರತೀರ್ಥರು)
ವಾದಿ ಶರಭ ಬೇರುಂಡ = ವಾದಿಗಳೆಂಬ ಶರಭಗಳನ್ನು ಭೇದಿಸುವ ಭೇರುಂಡ ಪಕ್ಷಿ
ತಂತ್ರದರಸ = ಶ್ರೀ ಮಹಾವಿಷ್ಣು
ಭವ = ಶ್ರೀ ರುದ್ರದೇವರು
ಭಾವನಾಮ = ಜಗದ ಸೃಷ್ಟಿ ಮತ್ತು ಸಂಹಾರಗಳನ್ನು ಮಾಡುವವನು (ಶ್ರೀಹರಿ)

" ಶ್ರೀ ವರದೇಂದ್ರತೀರ್ಥರ ಸಂಕ್ಷಿಪ್ತ ಮಾಹಿತಿ "

ಸಾಕ್ಷಾತ್ ಹಂಸನಾಮಕ ಪರಮಾತ್ಮನಿಂದ ಅವಿಚ್ಛಿನ್ನವಾಗಿ ನಡೆದು ಬಂದ ಸತ್ಪರಂಪರೆಯಾದ ಜಗದ್ಗುರು ಶ್ರೀಮನ್ಮಧ್ವಾಚಾರ್ಯರ ಮೂಲ ಮಹಾಸಂಸ್ಥಾನಾಧೀಶ್ವರರಾದ ಶ್ರೀ ರಾಘವೇಂದ್ರಸ್ವಾಮಿಗಳವರ ಮಠದ ವೇದಾಂತ ವಿದ್ಯಾ ಸಾಮ್ರಾಜ್ಯಾಧೀಶ್ವರರೂ; ವೇದ - ವೇದಾಂತ - ಶ್ರುತಿ - ಸ್ಮೃತಿ - ಪುರಾಣ - ಇತಿಹಾಸ ಕೋವಿದರಾದ ಶ್ರೀ ವರದೇಂದ್ರತೀರ್ಥರ ಕಿರು ಪರಿಚಯದ ಪ್ರಯತ್ನ ಇಲ್ಲಿದೆ!!
ಹೆಸರು : ವಿದ್ವಾನ್ ಶ್ರೀ ಬಲರಾಮಾಚಾರ್ಯರು
ತಂದೆ : ವಿದ್ವಾನ್ ಶ್ರೀ ವೇಣುಗೋಪಾಲಾಚಾರ್ಯರು
ವಿದ್ಯಾ ಗುರುಗಳು :ವಿದ್ವಾನ್ ಶ್ರೀ ವೇಣುಗೋಪಾಲಾಚಾರ್ಯರು ಮತ್ತು ಶ್ರೀ ಶ್ರೀನಿವಾಸಾಚಾರ್ಯರು (ಶ್ರೀ ವಾದೀಂದ್ರತೀರ್ಥರು)

ಗೋತ್ರ : ಗೌತಮ

ವಂಶ : ಷಾಷ್ಠಿಕ

ಇವರು ಶ್ರೀ ರಾಯರ ಪೂರ್ವಾಶ್ರಮ ಪುತ್ರರಾದ ಶ್ರೀ ಲಕ್ಷ್ಮೀನಾರಾಯಣಾಚಾರ್ಯರ ಮಕ್ಕಳಾದ ಶ್ರೀ ಪುರುಷೋತ್ತಮಾಚಾರ್ಯರಿ ಗೆ ಶ್ರೀ ಶ್ರೀನಿವಾಸಾಚಾರ್ಯರು ಮತ್ತು ಶ್ರೀ ವೇಣುಗೋಪಾಲಾಚಾರ್ಯ ಪುತ್ರರು. ಶ್ರೀ ಶ್ರೀನಿವಾಸಾಚಾರ್ಯರೇ ಶ್ರೀ ವಾದೀಂದ್ರತೀರ್ಥರು. .

ಶ್ರೀ ವೇಣುಗೋಪಾಲಾಚಾರ್ಯರಿಗೆ ಶ್ರೀ ಪುರುಷೋತ್ತಮಾಚಾರ್ಯರು, ಶ್ರೀ ಬಲರಾಮಾಚಾರ್ಯರು (ಶ್ರೀ ಜಗನ್ನಾಥದಾಸರ ವಿದ್ಯಾ ಗುರುಗಳು) ಮತ್ತು ಶ್ರೀ ಲಕ್ಷ್ಮೀನಾರಾಯಣಾಚಾರ್ಯರು. ಇವರುಗಳೂ ಶ್ರೀ ರಾಯರ ಮರಿ ಮಕ್ಕಳು)

ಶ್ರೀ ಪುರುಷೋತ್ತಮಾಚಾರ್ಯರು (ಶ್ರೀ ವಸುಧೇಂದ್ರತೀರ್ಥರು)

ಶ್ರೀ ಬಲರಾಮಾಚಾರ್ಯರು (ಶ್ರೀ ವರದೇಂದ್ರತೀರ್ಥರು)

ಶ್ರೀ ಲಕ್ಷ್ಮೀನಾರಾಯಣಾಚಾರ್ಯರು (ಶ್ರೀ ಭುವನೇಂದ್ರತೀರ್ಥರು)

ಅಂಶ : ಶ್ರೀ ರುದ್ರದೇವರು

ಶ್ರೀ ಸುಂದರವಿಠಲರು...

ನಿಜ ಗುರುಗಳೇವೆ ಋಜುಪುಂಗವರಾಗಿ ।
ಅಜನ ಪಟ್ಟಕೆ ಸಾರುವ ಆ ಕಲ್ಪದಲಿ ।
ಭಜನೆಯಗೈದು ಪಂಕಜನಾಭನ ಪಾದ ।
ಭುಜಗೇಶ ಅಜನಯ್ಯಗೆ ತಲ್ಪನಾಗ್ವಿ ।।

ಆವೇಶ : ಶ್ರೀ ಚತುರ್ಮುಖ ಬ್ರಹ್ಮದೇವರು

ಶ್ರೀ ಅಹ್ಲಾದಾಂಶ ಗುರುಜಗನ್ನಾಥದಾಸರು..

ಧಾತಾಂಶರಿಂದಲಿ ತಾನುದ್ಭವಿಸೀ -
ಸದ್ಗುರುವರನೆನಿಸೀ ।
ಧೂತ ಪಾಪಾತ್ಮಕನು ತಾನಾಗೀ -
ಶ್ರೀ ಹರಿಗೆ ಬೇಕಾಗೀ ।
ಪ್ರೀತ ಗುರುಜಗನ್ನಾಥವಿಠಲನತೀ ।

ಪ್ರೀತಿಲಿ ಭಜಿಸುತ ದೂತರ ಪೊರೆವಾ ।।

ಶ್ರೀ ವರದೇಂದ್ರವಿಠಲರು...

ಧಾತಾಂಶದಿಂದಲಿ ಭೂತಳದಲ್ಲಿ -
ಜನಿಸಿದೆ ಮುದದಲ್ಲಿ ।
ಪ್ರೀತರಾಗುತಲೆ ಬಂದಿಹರಿಲ್ಲಿ-
ಆದ ಕಾರಣದಲ್ಲಿ ।
ಭೂತವೇತಾಳದ ಭೀತಿಗಳಲ್ಲಿ -
ಪೋಪವು ಜವದಲ್ಲಿ ।।
ವಾತ ವಿನುತ ವರದೇಂದ್ರವಿಠಲನ ।
ದೂತ ನೆನಿಸುತಿಹ ಭೂತಳೇಂದ್ರ ಸುತ ।।

ಆಶ್ರಮ ಗುರುಗಳು : ಶ್ರೀ ವಸುಧೇಂದ್ರತೀರ್ಥರು
ಆಶ್ರಮ ನಾಮ : ಶ್ರೀ ವರದೇಂದ್ರತೀರ್ಥರು
ವಿದ್ಯಾ ಶಿಷ್ಯರು : ಶ್ರೀ ಶ್ರೀನಿವಾಸಾಚಾರ್ಯರು (ಶ್ರೀ ಜಗನ್ನಾಥದಾಸರು)
ಶ್ರೀ ಭುವನೇಂದ್ರತೀರ್ಥರು
ಆಶ್ರಮ ಶಿಷ್ಯರು : ಶ್ರೀ ಭುವನೇಂದ್ರತೀರ್ಥರು, ಶ್ರೀ ಜಗನ್ನಾಥದಾಸರು..
ವರದೇಂದ್ರಯತಿ " ಶಿಷ್ಯರು :
ಶ್ರೀ ಪ್ರಾಣೇಶದಾಸರು ಮತ್ತು ಅವರ ಶಿಷ್ಯ ಪ್ರಶಿಷ್ಯರು
ಸಮಕಾಲೀನ ಹರಿದಾಸರು: ಶ್ರೀ ಗುರುಗೋಪಾಲದಾಸರು - ಶ್ರೀ ವರದ ಗೋಪಾಲದಾಸರು -
ಶ್ರೀ ತಂದೆ ಗೋಪಾಲದಾಸರು ಮತ್ತು ಅವರ ಶಿಷ್ಯ ಪ್ರಶಿಷ್ಯರು.
" ಭಕ್ತಜನ ಮಂದಾರ "
ಶ್ರೀ ವರದೇಂದ್ರತೀರ್ಥರು ಮಹಾ ಮಹಿಮರೂ; ವಿದ್ಯೆಗೆ ಮಾತೃ ಸ್ಥಾನವೆಂದು ಪ್ರಖ್ಯಾತವೂ -
ಸಂಪದ್ಭರಿತವೂ ಆದ ಪೂನಾ ಪಟ್ಟಣದಲ್ಲಿ ಖ್ಯಾತ ಪಂಡಿತರೂ - ರಾಜಕೀಯ ನ್ಯಾಯಾಧೀಶರೂ
- ಶ್ರೇಷ್ಠ ವಾದ ಕುಶಲರೂ ಆದ ಶ್ರೀ ರಾಮಶಾಸ್ತ್ರಿ ಪ್ರಭುಣೆಯವರನ್ನು 9 ದಿನಗಳ ಕಾಲ
ಅವರೊಡನೆ ವಾದ ಮಾಡಿ ಪರಾಜಯಗೊಳಿಸಿ; ದ್ವೈತ ವಿಜಯ ದುಂದುಭಿಯನ್ನು ಮೊಳಗಿಸಿ;

ಪಣಬಂಧದಂತೆ ಶ್ರೀ ರಾಮಶಾಸ್ತ್ರಿಗಳ ಮನೆಯನ್ನು ಪೇಶ್ವೆ ರಾಜರ ರಾಜಗುರುತ್ವವನ್ನೂ; ಗ್ರಾಮ ಭೂಮಿಗಳನ್ನು ಪಡೆದು ಅಖಂಡ ಕೀರ್ತಿಗೆ ಪಾತ್ರರಾಗಿ ಪೂನಾ ಪಟ್ಟಣದ ಬೃಂದಾವನದಲ್ಲಿ ವಿರಾಮಾನರಾಗಿ ಸಜ್ಜನ ಭಕ್ತರನ್ನು ಕಲ್ಪವೃಕ್ಷ ಕಾಮಧೇನುವಿನಂತೆ ರಕ್ಷಿಸುತ್ತಿರುವರು!!

" ಹರಿದಾಸ ಸಾಹಿತ್ಯಕ್ಕೆ ಶ್ರೀ ವರದೇಂದ್ರತೀರ್ಥರ ಕೊಡುಗೆ "

ಶ್ರೀ ವರದೇಂದ್ರತೀರ್ಥರ ಮತ್ತು ಶ್ರೀ ಜಗನ್ನಾಥದಾಸರ ಗುರುಶಿಷ್ಯರ ಬಾಂಧವ್ಯ ಅತಿ ಮಧುರವಾಗಿತ್ತು. ಒಮ್ಮೆ ಶ್ರೀ ಜಗನ್ನಾಥದಾಸರು ಸಚ್ಚಾಸ್ತ್ರ ಕೋವಿದರಾದರೂ; ತಮ್ಮಂಥಾ ವಿದ್ಮಣ್ಮಣಿಗಳಿಗೆ ವಿದ್ಯಾ ಗುರುಗಳಾಗಿದ್ದ ಶ್ರೀ ವರದೇಂದ್ರತೀರ್ಥರಲ್ಲಿಗೆ ಬಂದು ಸಾಷ್ಟಾಂಗವೆರಾಗಿ ಕೈ ಜೋಡಿಸಿ ನಿಂತು ಸ್ವಾಮೀ! ಗೀರ್ವಾಣಾಭಾಷಾ ಕೋವಿದ ಚಕೋರಚಂದ್ರಮರೇ, ತಾವು ಪಾಮರರಾದ ನಮ್ಮಂಥವರ ಉದ್ಧಾರಾರ್ಥವಾಗಿ " ತಂತ್ರಸಾರ " ವನ್ನು ಕನ್ನಡದಲ್ಲಿ ರಚಿಸಿ ಅನುಗ್ರಹಿಸಬೇಕೆಂದು ಸವಿನಯವಾಗಿ ಪ್ರಾರ್ಥಿಸಿಕೊಂಡರು. ಆಗ ಗುರುಗಳು ಸಂತೋಷ ಪಟ್ಟು ದಾಸಾ!

ನೀನು ಕನ್ನಡದಲ್ಲಿ ಕೃತಿಗಳನ್ನು ರಚಿಸುವಲ್ಲಿ ನಮಗೆ ಸಂತೋಷವಾಗಿರುವಲ್ಲಿ ನಿನಗೆ ಸಂಶಯವೇ? ನಿನ್ನ ಕೃತಿಗಳು ನಮಗೆ ಪ್ರಿಯವಾದುವುಗಳೇ. ನಾವೂ ಕನ್ನಡವನ್ನು ಪ್ರೀತಿಸುತ್ತೇವೆ. ಶ್ರೀ ಹರಿಯ ಪ್ರೀತ್ಯರ್ಥವಾಗಿಯೂ - ನಿನ್ನ ಅಭಿಲಾಷೆಯನ್ನು ಪೂರೈಸಲಿಕ್ಕಾಗಿಯೂ ನಾವು " ತಂತ್ರಸಾರ " ವನ್ನು ಕನ್ನಡದಲ್ಲಿ ರಚಿಸುತ್ತೇವೆಂದು ಹೇಳಿ. ತಂತ್ರಸಾರ ಸಂಗ್ರಹ (ಕನ್ನಡ) - (ಓಂಕಾರ - ಮಾತ್ರ ವರ್ಣಗಳ ಉತ್ಪತ್ತಿ) ಸೃಷ್ಠಿ ಪ್ರಕರಣ - " ವರದೇಂದ್ರಯತಿ " ಎಂಬ ಹರಿಪ್ರಸಾದಂಕಿತದಲ್ಲಿ ಕೃತಿಗಳನ್ನು ರಚಿಸಿದ್ದಾರೆ.

" ಗ್ರಂಥಗಳು "

ದೇವಾಪೂಜಾ ಪೂಜಾ ಪದ್ಧತಿ

" ಪರವಾದಿ ದಿಗ್ವಿಜಯ ಮತ್ತು ಬೃಂದಾವನ ಪ್ರವೇಶ "

ಶ್ರೀ ವರದೇಂದ್ರತೀರ್ಥರು ಸಂಚಾರತ್ವೇನ ಪೂನಾಕ್ಕೆ ದಿಗ್ವಿಜಯ ಮಾಡಿಸಿದರು. ಪೇಶ್ವೇಯವರ ಕಾಲದಿಂದಲೂ ವಿದ್ವಜ್ಜನಗಳಿಂದ ತುಂಬಿದ ಪಟ್ಟಣ ಪೂನಾ. ಅಲ್ಲಿ ಶ್ರೀ ರಾಮಶಾಸ್ತ್ರಿಗಳೆಂಬ ಉದ್ಧಾಮ ಪಂಡಿತರು. ಶ್ರೀ ವರದೇಂದ್ರತೀರ್ಥರಲ್ಲಿ ವಾದ ಮಾಡಿ ಶ್ರೀಗಳವರ ವಾದವನ್ನು

ಒಪ್ಪಿಕೊಂಡು ವಾದ ನಿಯಮದ ಪ್ರಕಾರ ತಮ್ಮ ಮನೆಯನ್ನು ಶ್ರೀ ವರದೇಂದ್ರತೀರ್ಥರಿಗೆ ದಾನವಾಗಿ ಕೊಟ್ಟುಬಿಟ್ಟರು.

ಶ್ರೀ ವರದೇಂದ್ರತೀರ್ಥರು ಆ ಮನೆಯನ್ನು ಮಠವನ್ನಾಗಿ ಪರಿವರ್ತಿಸಿ ಅಲ್ಲೇ ವಾಸ ಮಾಡತೊಡಗಿದರು. ಆ ಮಠದಲ್ಲಿಯೇ ಶ್ರೀ ವರದೇಂದ್ರತೀರ್ಥರ ಮೂಲ ಬೃಂದಾವನ ವಿರಾಜಮಾನವಾಗಿದೆ!!

PS. My gratitude to all those scholars who have provided this script on Sri Varadendra Theertharu.

www.bhargavasarma.blogspot.com



Hari Sarvottama
Vayu Jivottama

Hari Sarvottama
Vayu Jivottama

Sri VaradendraTheertharu (Pune)
(Aashaada Sukla Shashti)

ವಾದೇ ವಿಜಯಶೀಲಾಯ ವರದಾಯ ವರಾರ್ಥಿನಾಂ|

ವದಾನ್ಯಜನಸಿಂಹಾಯ ವರದೇಂದ್ರಾಯ ತೇ ನಮ:|

वादे विजयशीलाय वरदाय वरार्थिनां।
वदान्यजनसिंहाय वरदेंद्राय ते नम:।

(1761-1785)

🙏🙏🙏

https://archive.org/details/varadendra-theertharu

Commentary on Likucha Kavithilaka

Thrivikrama Panditacharya
Narayana Panditacharya

(Contemporary disciples of Sri Madhvacharya)

If Sri Thrivikrama Panditacharya [perhaps, only one who could see the three incarnations of Lord Vayu (Hanuma – Bheema - Madhva)] wrote Sarva Siddhipradha Sri VaayuStuti, His son Sri Narayana Panditacharya wrote Sri MadhvaVijaya extolling the glory & accomplishments of Sri MadhvacharyaRu.

A glorious and commendable service by Father & Son to the devout society in general and Madhva fraternity in particular, who have shown saadhana maarga for saadhakas, the two are nitya parayana Granthas for Mumukshu including Madhva Yatis.

Vayustuti came out spontaneously/extempore from Sri ThrivikramaPanditacharya astounded when he saw Sri Madhvacharya in three forms as, Hanuma worshipping SriRama; Bheemasena worshipping SriKrishna and Madhvacharya worshipping SriVedavyasaru, (Hanuma-Bheema-Madhva);

As VayuStuti only extols Lord Vayu (Hanuma-Bheema-Madhva); Sri MadhvacharyaRu added two slokas (composed by HIm) called NakhaStuti glorifying the supreme God HariSarvottama Vishnu in His incarnation Narasimha. Put together it is called Sri HariVaayuStuti.

Moola Brundavana of Sri Thrivikrama Panditacharya &

Sri Narayana Panditacharya at Kasargod (Kerala)

Where exactly in Kasaragod are they located…

[Kasargod NEW bus stand.

Cross Karandakkad circle Pass adkathabail Bus stand

to the right is Gudde vishnu temple

Pass Central Plantation Crops Research Institute.

HP petrol pump (500 m from CPCRI)

right turn from here into the woods (literally woods) 100 m walk to Kavumutt (sangraha)]

Please find below commentary (sangraha) in English & Kannada on the two stalwarts… Trivikrama Panditacharya and Narayana Panditacharya…

Narayana Panditacharya is the author of Sumadhva Vijaya. He is the son of Trivikrama Panditacharya whom Sri Madhvacharya had converted into Madhvaism after defeating him in arguments for two weeks in the open assembly of scholars.

The first mention of Trivikrama Panditacharya is made in the 13th canto of the poem Madhva Vijaya. Sri Madhvacharya was travelling in Kabenadu, the state of the Kumbla ruler, Jayasimha.

He camped at the Madanadhipa-temple at Madhur which is about 8 Kms away from Kumbla. From there, in a procession of surpassing grandeur in which the ruler himself took part, Sri Madhvacharya was taken to Vishnumangala which is a temple

nearby. The crowd had gathered from about twenty-five surrounding Villages.

In the Mantapam (hall) Sri Madhvacharya addressed the large assembly consisting of many scholars by way of expounding the verses of the Bhagavata which were read out by one of his disciples viz Sri Hrsikesatirtha.

Here in the congregation, Trivikrama panditacharya made his first appearance. The

family history of Trivikrama Panditacharya is mentioned briefly by the poet which itself is his own family history.

It is better to explain the history in the words of C M Padmanabhacarya thus…

"There sat in this congregation, a Pandit, Trivikramacharya by name, whose erudition surpassed that of all the other pandits. He was a noteworthy personage whose scholarship had been the subject of universal praise. He had heard of Sri Madhvacharya and had come to test his worth.

"The personal history of Pandit Trivikramacharya may be told in a few words.

He was the son of Pandit Subrahmanya of Likuca lineage and Angeerasa gotra. He lived in the neighbourhood of Vishnumangalam in a house known as 'Kavumutt a few miles from Kasargod.

Trivikramacharya was a born genius, a prodigy who, when he took to the study of Vedanta was already an author of renown, having composed a very fine poem "Usaharana" and was a remarkable grammarian and a respected logician. He studied the huge literature of Sankara's Advaita so thoroughly that he knew it all by heart.

Pandit Subrahmanya had however a latent doubt that salvation was hard to attain by Advaitic methods. This doubt was one of

www.bhargavasarma.blogspot.com

the legacies he transmitted to his son while imparting the secrets of Vedanta. But it remained buried very deep in the Heart. To all appearance, Pandit Trivikrama was a famous exponent of Sankara's school whose profound learning put everybody to shame. By his side, even Bhanu the great Prabhakara, was deemed but a pigmy in knowledge.

It will be known from the verses in the poem that,

1. The family of the poet Subrahmanya Pandita, the grand-father of the poet (Narayana Panditacharya), Trivikrama Panditacharya, the father of the poet, and the poet himself had made the family to be renowned as the family of poet-cum-philosophers. The gotra was 'Angirasa' and the family was Likuca which was known as 'Pejattaya' family in local language.

2. The wife of Subrahmanya Pandita worshipped Krsna and Siva (Hari-Hara) to beget a child as no issue of her did live for long. Because of her dedication, she did get a son who later became a famous poet. He was born by the blessings of Hari-Hara.

3. The name of the child was Trivikrama meaning thereby a scholar in Vedas, the Vedanta and the poetry.

4. Trivikrama was an inborn poet. He had distinction of composing faultless poetry. He had that lustre of a poet from his birth itself like the rising Sun. There is a story that he had composed a verse during his early childhood when a Bauddha bhikshu had demanded alms.

5. Trivikrama Panditacharya after becoming a scholar composed a delightful poem by name Ushaharana.

6. He had defeated the great scholars like Bhanupandita of the Prabhakara sect. Though he was following Advaitism, he himself was not fully satisfied with it.

www.bhargavasarma.blogspot.com

7. In addition to the above, his father Subrahmanya Pandita had once advised him not to meditate on attributeless Brahman as only meditation of Krsna, rich with auspicious attributes would bring salvation.

8. Trivikrama Panditacharya, though was inevitably following Advaitism, was approached by the Mayavadins to challenge Sri Madhvacharya who had then come to Visnumangala.

Tnvikrama also listened to Sri Madhva's discourses and acknowledged his real knowledge. It was an opportunity for Trivikrama to get rid of his own ignorance.

9. Trivikrama argued with Sri Madhvacharya for fifteen days and finally accepted defeat.

10. Now coming to the particulars of Trivikrama Pandita and Narayana Panditacharya the details are as below…

In the Bhavaprakasika itself, Narayana Panditacharya has mentioned about his family. Trivikrama Pandita had three sons of which Narayana Panditacharya was the youngest.

There is a mention of three persons of Likuca family accepted as 'disciples' by Sri Madhvacharya. Two were with the name Sankara, the third was Trivikrama. Hence among these three disciples, one was Tnvikrama, the other was his younger brother with the name Sankara and the third one was from the same Likuca family having the same name Sankara.

Also there is a mention of one more person from Likuca family who had taken to asceticism under Achyutapreksa. This makes clear that the family of Narayana Panditacharya was renowned for scholarship, asceticism and poetic ability.

The works of Trivikrama Panditacharya…

1. Usaharana

www.bhargavasarma.blogspot.com

It is a poem in nine cantos The subject of the poem is the popular love story of Usha and Aniruddha.

2.Tattvapradipa

A gloss on Sri Madhvacharya's Brahmasutrabhasya (5000 granthas)

3. Vihsnustuti

Thirty-two verses composed in Sragdhara metre

4. Vayustuti

Thirty - nine verses in Sragdhara metre, praising three incarnations of God Vayu as Hanuman, Bhima and Madhva.

Works of Narayana Panditacharya

1. Tattvamanjari

Probably a commentary on Madhva's Vishnutattvavinirnaya

2. Pramanalakshana-tippani

It is said that Narayana Panditacharya had written such a work, but no manuscript seems to be available.

3. Nayacandrika

A commentary on Madhva's Anuvyakhyana – (2750 granthas)

4. Bhavaprakasika

It is a gloss on the Sumadhva Vijaya of the same author.

5. Yamaka-bharata-tika

A commentary on Madhva's Yamakabharata - not traceable.

6. Krsnamrta-maharnava-tika - A commentary on Madhva's Krsnamrta-maharnava. This is also not traceable.

7. SangrahaRamayana

A poem narrating the story of the Ramayana in six cantos.

www.bhargavasarma.blogspot.com

8. Sn SumadhvaVijaya - It is a Mahakavya in sixteen cantos and 1008 verses. It is the biography of Sri Madhvacharya.

9. AnumadhvaVijaya

This is known as Prameyanavamalika. It narrates briefly in 32 verses, the contents of Sumadhva Vijaya.

10. ManiManjari - It is a poem in eight cantos. It contains the history of Vaisnavism prior to Madhva. It deals with the story of Lord Rama, Lord Krsna, Buddha, Sankara and Mandanamisra.

11. Subhodaya

It is a poem in five cantos with innumerable vargas (groups). Each group contains 10 verses. Every group has a separate metre. The title means ^Rising of the good' The rising is nothing but getting salvation by giving up the 'quality of rebirth of Atman.

12. Parijataharana - It is a poem in three cantos, dealing with the incident' of Lord Krsna's bringing down the Parijata tree at the request of Satyabhama.

13. Yoga-dipika " It has 730 granthas The chapters are known as patalas. There are ten patalas. It deals with Diksa, Ekadasi and other rituals.

14. Siva-stuti - It is a praise of god Shiva in 13 verses.

MINOR WORKS

15. Anu-vayu-stuti

16 Laghu-taratamya-stotra

17 Nrsimha-stuti

18 Tithi-traya-nirnaya

19 Amsamsi-nirnaya

20 Bhavadipa

www.bhargavasarma.blogspot.com

21 Mithyatvanumanakhandana-tika

22 Anubhasyatika

23 Madhvdmrta-maharnava

24 RamagiTtyastaka

25. Dasarathyastaka

26 Krsnamalastotra

27 Mahalaksmi-stuti

28 Madhva-kavaca

29. Dhyanaprakriya

30 Haristuti-Vayustuti

31 Yamaka stotra

Trivikrma Panditacharya had a daughter by name Kalyani Devi She is said to have composed two poems,

1) Laghuvayustuti and 2) Laghutaratamyastotra

There is no doubt that the family of Narayana Panditacharya was a family of scholars, poets, philosophers and ascetics.

There is a mention of a Sankaracarya, the younger brother of Tnvikrama Panditacharya ie. paternal uncle of Narayana Panditacharya who was the Librarian of Sri Madhvacharya.

The thirst for knowledge had prompted Trivikrama Panditacharya to read secretly and digest the books, which were in the custody of this Sankaracarya who was helping him in the same.

This Sahkaracarya did compose a gloss on Anuvyakhyana which is known as Sambandhadipika.

Narayana Panditacharya was an orthodox brahmin having his residence at Kavumath, near Kasargod. Now also we can

www.bhargavasarma.blogspot.com

witness the temple where Sri Madhva was taken in procession and the place where Trivikrama Panditacharya debated with Sri Madhvacharya.

[Depicted image is an icon of SriVatsaNarayana handed over by Sri MadhvacharyaRu to Sri TrivikramaPanditacharya.]

PDF Link…

https://archive.org/details/likucha-kavi-thrivikrama-panditacharya-narayana-panditacharya


त्रिविक्रमपण्डिताचार्यः
madhwa_infogram Today's Aradhane | ಇಂದಿನ ಆರಾಧನೆ... more
ನಮೋನುದಾSSನಂದಮವಾಪ
ಲೋಕಸ್ತತ್ವಪ್ರದೀಪಾಕೃತಿಗೋಗಣೇನ|
ಯದಾಸ್ಯಶೀತಾಂಶುಭುವಾ ಗುರೂಂಸ್ತಾಂ
ತ್ರಿವಿಕ್ರಮಾರ್ಯಾನ್ ಪ್ರಣಮಾಮಿ ವರ್ಯಾನ್||
तमोनुदानन्दमवाप लोकः तत्वप्रदीपाकतिगोगणेन ।
यदास्यशीतांशुभुवा गुरूंस्तान त्रिविक्रमार्यान् प्रणमामि वर्यान्
॥

" ಸರ್ವ ಸಿದ್ಧಿಪದ - ಸರ್ವ ಇಷ್ಟಾರ್ಥಪ್ರದ ಶ್ರೀ ಹರಿ ವಾಯುಸ್ತುತಿಯನ್ನು ಜಗತ್ತಿಗೆ ನೀಡಿದ ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರ ಆರಾಧನಾ ಮಹೋತ್ಸವ "

" ದ್ವೈತ ಸಿಂಹಗೆ {ಶ್ರೀಮನ್ಮಧ್ವಾಚಾರ್ಯರು} ಶರಣಾದ ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರು "

" ವಾದದಲ್ಲಿ ವಿಕ್ರಮ ಸಾಧಿಸಿದ ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರು "

ಮಾಘ ಶುದ್ಧ ಪೌರ್ಣಿಮಾ ಭಾನುವಾರ - ಶ್ರೀಮದಾಚಾರ್ಯರ ಪ್ರೀತಿಯ ಶಿಷ್ಯರಾದ ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರ ಆರಾಧನಾ ಮಹೋತ್ಸವ., ಕಾವು ಮಠ., ".

" ಪ್ರಸಾವನೆ "

ಪ್ರತಿಯೊಬ್ಬ ಮಾಧ್ವರಿಗೂ - ಶ್ರೀಮದಾಚಾರ್ಯರ ಅಂತರಂಗ ಭಕ್ತರೂ - ಶಿಷ್ಯರಾದ ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರನ್ನೂ - ಅವರ ಪಂಡಿತ ಪುತ್ರರಾದ ಶ್ರೀ ನಾರಾಯಣ ಪಂಡಿತಾಚಾರ್ಯರ ಸ್ಮರಣೆ ನಿತ್ಯ ನಿರಂತರದಲ್ಲಿಯೂ ಮಾಡುವದು ಆದ್ಯ ಕರ್ತವ್ಯವಾಗಿದೆ.

ಕಾರಣ....

ತಂದೆಯವರಾದ ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರು - ಸಕಲಸಿದ್ಧಿ ಪ್ರದವಾದ ಶ್ರೀ ವಾಯುದೇವರ ಅವತಾರತ್ರಯ ಸ್ತುತಿ ರೂಪವಾದ " ಶ್ರೀ ವಾಯುಸ್ತುತಿ " ಯನ್ನು ರಚಿಸಿದರೆ - ಅವರ ಪುತ್ರರಾದ ಶ್ರೀ ನಾರಾಯಣ ಪಂಡಿತಾಚಾರ್ಯರು ಶ್ರೀ ಮಧ್ವಾಚಾರ್ಯರ ಇತಿಹಾಸವನ್ನು ತಿಳಿಸುವ " ಶ್ರೀ ಮಧ್ವ ವಿಜಯ " ಮಹಾ ಕಾವ್ಯವನ್ನು ರಚಿಸಿ ಕೊಟ್ಟು - ಸಾಧಕರಿಗೆ ಸಾಧನ ಮಾರ್ಗವನ್ನು ತೋರಿದ ಮಹಾನುಭಾವರು.

ಈ ಎರಡೂ ಕೃತಿಗಳನ್ನೂ ಮುಮುಕ್ಷು ಜೀವಿಗಳಾದ ಸಾಧಕರೂ - ಯೋಗಿಗಳೂ - ಸಕಲ ಮಾಧ್ವ ಯತಿಗಳೂ ನಿತ್ಯ ಪಾರಾಯಣ ಮಾಡುತ್ತಿರುವುದು ಪರಮಾದ್ಭುತ ವಿಷಯ !

ಶ್ರೀಮದಾಚಾರ್ಯರಿಗೆ ಅತ್ಯಂತ ಆಪ್ತರಾದ ಪಂಡಿತದ್ವಯರ ಕುರಿತು - ಅವರ ಆರಾಧನಾ ಸಂದರ್ಭದಲ್ಲಿ ತಿಳಿದುಕೊಳ್ಳುವ ಪ್ರಯತ್ನ ಮಾಡೋಣ.....

" ವಿಷ್ಣು ಮಂಗಲ " ವು ದಕ್ಷಿಣ ದೇಶದ ಒಂದು ದಿವ್ಯ ಕ್ಷೇತ್ರ. ಅಲ್ಲಿಯ ಶ್ರೀ ವಿಷ್ಣು ದೇವಾಲಯವು ನಾಡಿನಲ್ಲೆಲ್ಲ ಪ್ರಸಿದ್ಧವಾದ ದೇವಾಲಯವೆನಿಸಿದೆ.

800 ವರ್ಷಗಳ ಹಿಂದೆ ಆ ದೇಶದಲ್ಲಿ " ಜಯಸಿಂಹ " ಎಂಬ ದೊರೆಯು ರಾಜ್ಯವಾಳುತ್ತಿದ್ದನು.

" ಶ್ರೀಮನ್ಮಧ್ವಾಚಾರ್ಯರು ಉಡುಪಿಯಲ್ಲಿ ಅವತಾರವೆತ್ತಿ - ಲೋಕ ಜೀವನವನೆಲ್ಲ ಪಾವನಗೈಯುತ್ತಿದ್ದ ಕಾಲವದು ".

" ಶ್ರೀ ಸರ್ವಜ್ಞಾಚಾರ್ಯ " ರ ಕೀರ್ತಿಯನ್ನು ಕೇಳಿದ ಜಯಸಿಂಹ ನೃಪನಿಗೆ ಆ ಪುಣ್ಯ ಪುರುಷರ ಅಡಿದಾವರೆಯ ಹುಡಿಯು ತನ್ನ ನಾಡಿನಲ್ಲಿ ಬೀಳುವಂತೆ ಮಾಡಬೇಕೆಂದು ಬಲವತ್ತರವಾದ ಬಯಕೆಯಾಯಿತು.

ಆ ಜಯಸಿಂಹ ನೃಪನ ಭಕ್ತಿಯುಕ್ತವಾದ ಬೇಡಿಕೆಗಳನ್ನು ಮನ್ನಿಸಿ ಶ್ರೀ ಆನಂದತೀರ್ಥರು ವಿಷ್ಣುಮಂಗಲಕ್ಕೆ ದಯ ಮಾಡಿಸಿದರು.

ವಿಷ್ಣು ಮಂಗಲ ದೇವಾಲಯದಲ್ಲಿ ಶ್ರೀ ಸರ್ವಜ್ಞಾಚಾರ್ಯರ ಸ್ವಾಗತಕ್ಕಾಗಿ ನೆರೆದ ಸಭೆಯಲ್ಲಿ ಕೂಡಿದ ಪಂಡಿತರಿಗೆ ಲೆಕ್ಕವಿಲ್ಲ. ಸೇರಿದ ನರ - ನಾರಿಯರಿಗೆ ಮಿತಿಯಿಲ್ಲ. ಜನಸ್ತೋಮದಿಂದ ಕಿಕ್ಕಿರಿದ ಆ ಪ್ರಚಂಡ್ರ ಸಭೆಯಲ್ಲಿ " ಋಜು ಪುಂಗವರಾದ ಶ್ರೀ ಸರ್ವಜ್ಞಾಚಾರ್ಯರು - ಮೇಘ ಗಂಭೀರವಾದ ಧ್ವನಿಯಿಂದ ಶ್ರೀಮದ್ಭಾಗವತ ಪ್ರವಚನ " ವನ್ನು ಮಾಡಿದರು.

ಶ್ರೀಮದಾಚಾರ್ಯರ ಮಾತಿನ ಮಾದರಿ - ಭಾಷೆಯ ಮಾದರಿ - ವಿದ್ವತ್ತೆಯ ಚಾತುರಿ ಮತ್ತು ಅಸ್ಖಲಿತವಾದ ವೈಗ್ವೈಖರಿ ಇವುಗಳನ್ನೆಲ್ಲ ಕಂಡು - ಕೇಳಿ ಸಭಿಕರೆಲ್ಲರೂ ಹಿಗ್ಗಿ ಸಂತಸದಿಂದ ಪುಳಕಗೊಂಡರು.

ಮಹಾರಾಜನಂತೂ ಇಂಥಾ ಸದ್ಗುರುಗಳು ದೊರಕಿದ್ದು ತನ್ನ ಅಹೋಭಾಗ್ಯ ಎಂದುಕೊಂಡ.

ಕಳೆದು ಹೋದ ಶ್ರೀಮದಾಚಾರ್ಯರ ಗ್ರಂಥ ಭಾಂಡಾರವನ್ನು ಪತ್ತೆ ಮಾಡ್ಸಿ - ತರಿಸಿ ತಂದು ಒಪ್ಪಿಸಿ ದಯಮಾಡಿ ಸ್ವೀಕರಿಸಬೇಕೆಂದು ಬಿನ್ನವಿಸಿದ.

ಶ್ರೀ ಸರ್ವಜ್ಞಾಚಾರ್ಯರು ತಮ್ಮ ಅಪೂರ್ವವಾದ ಗ್ರಂಥ ಭಾಂಡಾರವನ್ನು ಸ್ವೀಕರಿಸಿ ರಾಜನನ್ನೂ, ಜನರನ್ನೂ ಆಶೀರ್ವಾದಗಳಿಂದ ಅನುಗ್ರಹಿಸಿದರು.

ಆ ಮಹಾರಾಜನ ಭಾಗ್ಯಕ್ಕೆ ಎಣೆ ಇಲ್ಲ ಎಂದಿತು ನೆರೆದ ಜನ.

" ಬಾಲ ಪ್ರತಿಭೆಯಿಂದ ಶ್ರೀಮದಾಚಾರ್ಯರ ಸ್ತುತಿ "

ಅಷ್ಟರಲ್ಲಿ ಆ ಸಭೆಯಲ್ಲಿ ತೇಜ:ಪುಂಜವಾದ ಒಂದು ವ್ಯಕ್ತಿಯು ಪ್ರವೇಶಿಸಿತು. ಅವರು ನೇರವಾಗಿ ಬಂದು ಶ್ರೀಮದಾಚಾರ್ಯರಿಗೆ ನಮಸ್ಕಾರ ಮಾಡಿದರು. ಅವರ ಪಾದದಡಿಯಲ್ಲಿ ಬಾಗಿ ವಿನಯದಿಂದ ನಮ್ರನಾಗಿ ಕುಳಿತ ಜಯಸಿಂಹ ದೊರೆಯನ್ನು ನೋಡಿದರು ಮತ್ತು ಗಂಭೀರ ಧ್ವನಿಯಿಂದ ಪದ್ಯವೊಂದನ್ನು ಹಾಡಿದರು.

ಸ್ವಃ ಸುಂದರೀ ಭುಜಲತಾ ಪರಿರಂಭಣೇ ಧೂಃ ।

ಪೌರಂದರೀ ಭವತಿ ಯಂ ಭಜತಾಂ ಭುಜಿಷ್ಯಾ ।।

ಆನಂದತೀರ್ಥ ಭಗವತ್ಪದ ಪದ್ಮರೇಣುಃ ।

ಸ್ವಾನಂದದೋ ಭವತು ತೇ ಜಯಸಿಂಹ ಭೂಪಃ ।।

" ಶ್ರೀಮದಾನಂದತೀರ್ಥರ ಭಗವತ್ಪಾದರ ಅಡಿದಾವರೆಯ ಹುಡಿಯನ್ನು ಮುಡಿಯಲ್ಲಿ ಧರಿಸಿದವರನ್ನು ಸ್ವರ್ಗ ಸಿರಿಯು ದಾಸಿಯಾಗಿ ಸೇವಿಸುತ್ತದೆ. ಇಂಥಾ ಶ್ರೀಮದಾಚಾರ್ಯರ ಚರಣ ಧೂಳಿಯ ಕಣವು ನಿನಗೆ ಆನಂದವನ್ನು ನೀಡಲಿ. "

ಆಗಂತುಕರ ಈ ಪದ್ಯದಲ್ಲಿಯ ಸಂಸ್ಕೃತದ ಸೊಗಸು - ಸೌಂದರ್ಯವನ್ನೂ - ನಾದ ಮಾಧುರ್ಯವನ್ನೂ ಕೇಳಿದ ಸಭಿಕರೆಲ್ಲರೂ ಸ್ತಬ್ಧರಾದರು - ವಿಸ್ಮಯ ಮುಗ್ಧರೂ ಆದರು. ಪಂಡಿತ ಪಾಮರರೆಲ್ಲರೂ ಆ ಪಂಡಿತ ಪ್ರಕಾಂಡರನ್ನು ಕೌತುಕದಿಂದ ನೋಡ ತೊಡಗಿದರು. ಅವರು ಬೇರಾರೂ ಆಗದೆ ತುಳು ದೇಶದ ಸುಪ್ರಸಿದ್ಧ ಅದ್ವೈತ ವಿದ್ವಾಂಸರಾದ ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರೇ ಆಗಿದ್ದರು.

" ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರ ಸಂಕ್ಷಿಪ್ತ ಮಾಹಿತಿ "

ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರ ಮನೆತನವು ದಕ್ಷಿಣ ದೇಶದಲ್ಲೆಲ್ಲ ವಿದ್ವಾಂಸರ ಮನೆತನವೆಂದು ಪ್ರಸಿದ್ಧವಾಗಿತ್ತು.

ಆಂಗೀರಸ ಗೋತ್ರದ ಈ ಕುಟುಂಬದಲ್ಲಿ ಶ್ರೀ ಸುಬ್ರಹ್ಮಣ್ಯ ಪಂಡಿತರು ಮಹಾ ವಿದ್ವದ್ವರೇಣ್ಯರಾಗಿದ್ದರು. ಅವರ ಮಕ್ಕಳಾದ ಶ್ರೀ ತ್ರಿವಿಕ್ರಮ ಪಂಡಿತರೂ ಕೂಡ ಸರ್ವ ವಿದ್ಯೆಗಳ ತವರು ಮನೆಯಂತಿದ್ದರು.

ಅವರ ತಾಯಿ - ತಂದೆಗಳು ಹರಿ - ಹರೇಶ್ವರನ ಸೇವೆ ಮಾಡಿ, ಅವನ ಕೃಪಾ ಪ್ರಸಾದದಿಂದ ಇಂಥಾ ವಿದ್ವತ್ ಪುತ್ರನನ್ನು ಹೆತ್ತಿದ್ದರು.

ಶ್ರೀ ಸುಬ್ರಹ್ಮಣ್ಯ ದಂಪತಿಗಳ ಈ ಮೊದಲಿನ ಅನೇಕ ಮಕ್ಕಳು ಉತ್ಪನ್ನ ವಿನಷ್ಟ ಘಟದಂತೆ ಹುಟ್ಟಿದ ಕೂಡಲೇ ಪಟ - ಪಟನೆ ಬಿದ್ದು ಸತ್ತು ಹೋಗಿದ್ದವು. ಆದುದರಿಂದ ಅವರು ಹರಿ - ಹರೇಶ್ವರನನ್ನು ಸೇವಿಸಿ ಇಂಥ ವಿದ್ವದ್ವರೇಣ್ಯನಾದ ಮಗನನ್ನು ಪಡೆದು ಕೃತಾರ್ಥರಾದರು.

" ಬಾಲ ಪ್ರತಿಭೆ "

ಮೇಧಾವಿಯಾದ ಈ ಶ್ರೀ ತ್ರಿವಿಕ್ರಮನು ಕಾವ್ಯ ಪ್ರಯೋಗ ಪರಿಣತರಾಗಿದ್ದರು. ಚಿಕ್ಕ ಬಾಲಕನಿದ್ದಾಗಲೇ ಅವರು " ಉಷಾಹರಣ " ಎಂಬ ಭಾವ ಬಂಧುರವೂ, ಅರ್ಥ ಸುಂದವೂ ಆದ ದಿವ್ಯ ಕಾವ್ಯವನ್ನು ರಚಿಸಿದ್ದರು.

ಕಾವ್ಯ ಮಾತ್ರವಲ್ಲದೆ ಶ್ರೀ ತ್ರಿವಿಕ್ರಮರಿಗೆ ಅಲ್ಲ ಶಾಸ್ತ್ರಗಳಲ್ಲಿಯೂ ಅಸಾಧಾರಣ ಪರಾಕ್ರಮವಿದ್ದಿತು. ವೇದ - ವೇದಾಂತಗಳನ್ನೆಲ್ಲ ಅಂಗೈಯ ನೆಲ್ಲಿಕಾಯಿಯಂತೆ ಅವರು ಚೆನ್ನಾಗಿ ಬಲ್ಲವರಾಗಿದ್ದರು. " ಅದ್ವೈತ ವೇದಾಂತದ ಒಂದೂಕಾಲು ಲಕ್ಷ ಗ್ರಂಥ " ಗಳನ್ನು ಅವರು ಆಲೋಡನ ಮಾಡಿ ಅದರಲ್ಲಿ ಪ್ರಚಂಡ ಪಾಂಡಿತ್ಯವನ್ನು ಸಂಪಾದಿಸಿದರು.

ನ್ಯಾಯ - ವೈಶೇಷಿಕ - ಭಾಟ್ಟ - ಭಾಸ್ಕರ ಮುಂತಾದ ಶಾಸ್ತ್ರಗಳಲ್ಲೆಲ್ಲ ಶ್ರೀ ತ್ರಿವಿಕ್ರಮರಿಗೆ ತಲಸ್ಪರ್ಶಿ ಪಾಂಡಿತ್ಯವಿತ್ತು.

ಭಾಸ್ಕರ ಮತದ ಭಾನು ಪಂಡಿತನು ಈ ಶ್ರೀ ತ್ರಿವಿಕ್ರಮರ ಜೊತೆಗೆ ವಾದಕ್ಕಿಳಿದು ಅತ್ಯಲ್ಪ ಸಮಯದಲ್ಲೇ ಸೋತನು.

ಅಂದಿನಿಂದ ಶ್ರೀ ತ್ರಿವಿಕ್ರಮರು " ಪ್ರತಿವಾದಿ ಭಯಂಕರ ತ್ರಿವಿಕ್ರಮ ಪಂಡಿತ " ರೆಂದು ಹೆಸರಾದರು.

ಅದ್ವೈತ ಶಾಸ್ತ್ರದಲ್ಲಿ ಪ್ರಕಾಂಡ ಪಂಡಿತರಾಗಿ ಭೂಮಂಡಲದೊಳಗೆ ಎಲ್ಲ ಕಡೆಗೂ ಜಯಭೇರಿಯನ್ನು ಹೊಡೆದು ಮನ್ನಣೆಯನ್ನು ಪಡೆದು ಬಂದ ಶ್ರೀ ತ್ರಿವಿಕ್ರಮ ಪಂಡಿತರನ್ನು ಅವರ ತಂದೆ ಶ್ರೀ ಸುಬ್ರಹ್ಮಣ್ಯ ಸೂರಿಗಳು ಒಂದು ದಿನ ಏಕಾಂತದಲ್ಲಿ ಕರೆದು ರಹಸ್ಯವಾಗಿ ಹೇಳಿದರು.

" ತಂದೆಯಿಂದ ಮಗನಿಗೆ - ನಿರ್ಗುಣೋಪಾಸನೆಯಿಂದ ಮುಕ್ತಿಯು ಆಗುವದಿಲ್ಲವೆಂದು - ಉಪದೇಶ "

ಮಗು ತ್ರಿವಿಕ್ರಮ ನಾವೇನೋ ಅದ್ವೈತ ವಿದ್ವಾಂಸರ ವಂಶದಲ್ಲಿ ಜನಿಸಿದ್ದೇನೆ.

ನಿರ್ಗುಣ ಉಪಾಸನೆಯೇ ನಮ್ಮ ಮತ ಪರಂಪರೆಯಲ್ಲಿ ಸದಾಚಾರವಾಗಿ ನಡೆದು ಬಂದಿದೆ.

ಆದರೆ ಶಾಸ್ತ್ರೀಯ ಗ್ರಂಥಗಳನ್ನು ಪರಿಶೀಲಿಸಿದರೆ " ನಿರ್ಗುಣೋಪಾಸನೆಯಿಂದ ಮುಕ್ತಿಯು ಆಗುವದಿಲ್ಲ " ವೆಂದು ಖಚಿತವಾಗಿ ತಿಳಿದು ಬರುತ್ತದೆ.

ಜ್ಞಾನಾನಂದಾದಿ ಗುಣಗಳಿಂದ ಸ್ಪೃಹಣೀಯವಾದ ನಿಜವಾದ ಮೋಕ್ಷ ದೊರೆಯಬೇಕಾದರೆ ನಿತ್ಯ ನಿರ್ದೋಷನೂ - ವಸುದೇವ ಪುತ್ರನೂ - ಜ್ಞಾನಾನಂದಾದಿ ಗುಣ ಪರಿಪೂರ್ಣನಾದ ಶ್ರೀ ಕೃಷ್ಣ ಪರಮಾತ್ಮನನ್ನೇ ನಿತ್ಯ ನಿರಂತರ ಧ್ಯಾನ ಮಾಡು !

ತಂದೆಯ ಈ ಮಾತನ್ನು ಕೇಳಿ ಆ ತ್ರಿವಿಕ್ರಮರ ಮನಸ್ಸಿನಲ್ಲಿ ಹೊಯ್ದಾಟವೂ ಪ್ರಾರಂಭವಾಯಿತು. ಅವರು ನಿರ್ಗುಣ ಉಪಾಸನೆಯ ಬಗ್ಗೆ ಅನೇಕ ಮಾಯಾವಾದ ಪಂಡಿತರ ಜೊತೆಗೆ ಚರ್ಚೆ ಮಾಡಿದರು.

ಅಸಂಖ್ಯ ಶಾಸ್ತ್ರೀಯ ಉದ್ಗ್ರಂಥಗಳನ್ನು ಸಮಾಲೋಚನೆ ಗೈದರು.

ಬ್ರಹ್ಮ ಸೂತ್ರಗಳ ಮೇಲಿನ 21 ಭಾಷ್ಯಗಳನ್ನೂ ಪರಿಶೀಲಿಸಿದರು.

ಎಲ್ಲ ಭಾಷ್ಯಗಳ ಚಿಂತನ - ಮಂಥನಗಳ ಅನಂತರ ಅವರಿಗೆ ಅತ್ಯಂತ ಕೌತುಕವೆನಿಸಿತು.

ಆ ಭಾಷ್ಯಗಳಿಗೂ, ಮೂಲ ಸೂತ್ರಗಳಿಗೂ ಸಂಗತಿಯೇ ಇರಲಿಲ್ಲ ಮತ್ತು ಈ ಭಾಷ್ಯಗಳೆಲ್ಲವೂ ಪರಸ್ಪರ ವಿಸಂಗತವಾಗಿದ್ದವು.

ಈ ಎಲ್ಲ ಸೂತ್ರ ಭಾಷ್ಯಗಳ ವಿಸಂಗತಿಯನ್ನು ಕಂಡು ಅವರ ಮನಸ್ಸು ವ್ಯಾಕುಲವಾಯಿತು.

ಇಂಥ ಉತ್ಪೂತ್ರವಾದ ಭಾಷ್ಯ ಗ್ರಂಥಗಳನ್ನೆಲ್ಲ ಬಿಟ್ಟು ಬಿಡಬೇಕೆಂದರೆ ಆ ಕಾಲದಲ್ಲಿ ಶ್ರೀ ಬಾದರಾಯಣರ ಅಭಿಪ್ರಾಯಕ್ಕೆ ಅನುಗುಣವಾದ ಬೇರಾವ ಭಾಷ್ಯವೂ ಇರಲಿಲ್ಲ.

ಆಯುದರಿಂದ ಏನು ಮಾಡುವದು??

ಸೂತ್ರ ವಿರುದ್ಧವೆಂದು ಗೊತ್ತಿದ್ದರೂ ಶ್ರೀ ತ್ರಿವಿಕ್ರಮರು ಪರಂಪರಾ ಪ್ರಾಪ್ತವೆಂದು ಮಾಯಾಮತದ ಭಾಷ್ಯವನ್ನೇ ಪಾರಾಯಣ, ಪ್ರವಚನ ಮಾಡುತ್ತಿದ್ದರು.

ಆದರೆ - ಅವರು ಆ ಭಾಷ್ಯವನ್ನು ಓದಿ - ಓದಿದಂತೆ ಅದರಲ್ಲಿಯ ಮಾತುಗಳೆಲ್ಲ ವೇದಶಾಸ್ತ್ರ, ಪುರಾಣ, ಇತಿಹಾಸ ವಚನಗಳಿಗೆ ವಿರುದ್ಧವಾಗಿವೆ ಎಂದು ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರಿಗೆ ಕಂಡು ಬಂದಿತು.

ಆದುದರಿಂದ ಸರ್ವಂಕಷಾಶೇಮುಷೀಕರಾದ ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರು ಸರ್ವ - ಮೂಲವಾದ ನಿಗಮಾಗಮಗಳನ್ನೆಲ್ಲ ಸ್ವಯಂ ಸಂಮರ್ಶನಗೈದು - ನಿರ್ಗುಣ ಉಪಾಸನೆಯನ್ನು ಬಿಟ್ಟು - ಅನಂತ ಕಲ್ಯಾಣ ಗುಣಪೂರ್ಣನಾದ ಶ್ರೀ ಮುಕುಂದನ ಉಪಾಸನೆಯನ್ನೇ ವೇದ ಶಾಸ್ತ್ರೋಕ್ತ ಮಾರ್ಗದಿಂದ ಮಾಡಬೇಕೆಂದು ನಿರ್ಧರಿಸಿದರು.

" ಸಿಂಹದ ಜೊತೆ ಸೆಣಸಾಟ "

ವಿಚಾರ ಜನ್ಯವಾದ ವಿವೇಕದಿಂದ ಶ್ರೀ ಪಂಡಿತಾಚಾರ್ಯರು ಗುಣಪೂರ್ಣನಾದ ಶ್ರೀ ಕೃಷ್ಣ ಪರಮಾತ್ಮನ ಉಪಾಸನೆಯನ್ನು ಮಾಡಲು ಉಪಕ್ರಮಿಸಿದಾದ ಜಗತ್ ಪೂರ್ಣವಾದ ಶ್ರೀ ಪೂರ್ಣಬೋಧರ ಕೀರ್ತಿಯು ಅವರ ಕಿವಿಗೆ ತಲುಪಿತು.

ಶ್ರೀಮದಾನಂದತೀರ್ಥ ವಿಷ್ಣುಮಂಗಲಕ್ಕೆ ದಯ ಮಾಡಿಸಿರುವರು ಎಂಬ ಸಮಾಚಾರವು ಅವರಿಗೆ ತಿಳಿದು ಬಂದಿತು ಮತ್ತು ವೇದ ಮಠದ ಉದ್ಧಾರಕರೆಂಬ ಸುಪ್ರಸಿದ್ಧರಾದ ಶ್ರೀ ಮಧ್ವ ಮುನಿಗಳ ದರ್ಶನವನ್ನು ತೆಗೆದುಕೊಳ್ಳಬೇಕು ಎಂಬ ಸುಪ್ತಾಕಾಂಕ್ಷೆಯು ಅವರಲ್ಲಿ ಹೆಡೆ ಎತ್ತಿತು.
ಶ್ರೀಮನ್ಮಧ್ವಾಚಾರ್ಯರು ಹೋದ ಹೋದಲ್ಲೆಲ್ಲ ಮಾಯಾವಾದ ಮತವನ್ನು ಖಂಡಿಸುವುದನ್ನು ಕಂಡು ಆ ಮತಾನುಯಾಯಿಗಳಿಗೆಲ್ಲ ಕಡುಕೋಪ
ಆದರೆ ಮಾಡುವುದೇನು?
ಹೊಟ್ಟೆಯಲ್ಲಿ ಯಷ್ಟೇ ಸಿಟ್ಟು ಅವರಲ್ಲಿ ತುಂಬಿದ್ದರೂ ಶ್ರೀ ಸರ್ವಜ್ಞಾಚಾರ್ಯರ ಜೊತೆಗೆ ವಾದ ವೇದಿಕೆಯಲ್ಲಿ ಕುಳಿತಾಗ ಎಂಥ ದಿಗ್ಗಜ ಪಂಡಿತರೂ ಧೂಳೀ ಪಟವಾಗಿ ಹೋಗುತ್ತಿದ್ದರು.
ಪ್ರಮಾಣ ಬದ್ಧವೂ, ಶಾಸ್ತ್ರ ಬದ್ಧವೂ ಆದ ಶ್ರೀ ಗುರು ಮಧ್ವಾಚಾರ್ಯರ ವೈಗ್ವೈಖರಿಗೆ ಮಾಯಾವಾದ ಪಂಡಿತರ ಎಲ್ಲ ವಾದಾಟೋಪವು ಕುಸಿದು ಅವರೆಲ್ಲರೂ ಮೂಕರಾಗುತ್ತಿದ್ದರು.
ಹೀಗೆ ಶ್ರೀಮದಾಚಾರ್ಯರ ಜೊತೆಗೆ ವಾದ ಮಾಡು ಧೈರ್ಯವಾಗಲಿ - ಚಾತುರ್ಯವಾಗಲಿ ಇಲ್ಲದ ಪಂಡಿತರೆಲ್ಲರೂ ಶ್ರೀ ತ್ರಿವಿಕ್ರಮ ಪಂಡಿತರಿಗೆ ದುಂಬಾಲು ಬಿದ್ದರು.
ಶ್ರೀ ತ್ರಿವಿಕ್ರಮರ ಅದ್ಭುತವಾದ ಶಾಸ್ತ್ರ ಪಾಂಡಿತ್ಯ ಮತ್ತು ವಾದ ವೈದುಷ್ಯ - ಗ್ರಂಥ ಸ್ಫೂರ್ತಿ ಹಾಗೂ ತರ್ಕ ಕರ್ಕಶವಾದ ತೈಲ ಬುದ್ಧಿಯ ಚಾಕಚಕ್ಯತೆ ಮುಂತಾದ ಗುಣಗಳನ್ನೂ ಅವರ ಪ್ರತಿಭಾ ಪ್ರಭಾವನನ್ನೂ ತಿಳಿದ ಅವರಿಗೆ ಈ ಶ್ರೀ ಪಂಡಿತಾಚಾರ್ಯರೊಬ್ಬರೇ ಶ್ರೀ ಸರ್ವಜ್ಞಾಚಾರ್ಯರ ಜೊತೆಗೆ ವಾದ ಮಾಡಿ ತಮ್ಮ ಮಾಯಾವಾದ ಮತದ ಮಾನವನ್ನು ಉಳಿಸಬಲ್ಲವರೆಂದು ಎನಿಸಿತು.
ಆದುದರಿಂದ ಅವರೆಲ್ಲರೂ ಶ್ರೀ ತ್ರಿವಿಕ್ರಮರ ಬಳಿಗೆ ಬಂದು ಅವರನ್ನು ವಾದಕ್ಕೆ ಹುರಿದುಂಬಿಸಿದರು.
ಆಚಾರ್ಯರೇ - ಪರಂಪರಾ ಪ್ರಾಪ್ತವಾದ ನಮ್ಮ ಸನಾತನ ಮಾಯಾವಾದ ಮತವನ್ನು ಶ್ರೀ ಮಧ್ವಾಚಾರ್ಯರು ಅವರ ಶಿಷ್ಯರೂ ಖಂಡಿಸುತ್ತಿದ್ದಾರೆ.
ನಿಮ್ಮಂಥ ಮಹಾ ಪಂಡಿತರು ನಮ್ಮ ಮಾಯಾವಾದ ವಾದವನ್ನು ಯುಕ್ತಿಯುಕ್ತವಾಗಿ ಖಂಡಿಸ ತೊಡಗಿದರೆ - ದ್ವೈತ ವಾದಿಗಳ ಸದ್ದು ಅಡಗಿ ಹೋಗುವುದು.

ವೇದದ ನದಿಗಳಲ್ಲಿ ಅವಗಾಹನ ಮಾಡಿ ಶಾಸ್ತ್ - ಸಾಗರದಲ್ಲಿ ಈಸಾಡುವ ಕಾವ್ಯ ಕಲಾ ಕುಶಲರಾದ ನಿಮ್ಮನ್ನು ವಾದ ವೇದಿಕೆಯಲ್ಲಿ ಎದುರಿಸಿ ಗೆಲವನ್ನು ಗಳಿಸಿದ ಗಜೇಂದ್ರನು ಇನ್ನೂ ಹುಟ್ಟಿಲ್ಲ.

ಆದರೆ ಈಗ ಮಾತ್ರ ದೈವವು ಅಂತ ಓರ್ವ ಪ್ರಚಂಡ ಪ್ರತಿವಾದಿ ಗಜವನ್ನು ಇಂದು ನಿಮ್ಮೆದುರು ತಂದು ನಿಲ್ಲಿಸಿದೆ.

ನೀವು ಆ ಮಧ ಗಜೇಂದ್ರನ ಜೊತೆಗೆ ವಾದ ಹೂಡಿರಿ. ಅವರನ್ನು ನಿರುತ್ತಾರರನ್ನು ಮಾಡಿರಿ. ನಿಮ್ಮ ಸ್ವಮತೀಯ ಪಂಡಿತರಿಗೆ ಒದಗಿ ಬಂದ ಭಯಾಪಾಯವನ್ನು ದೂರ ಮಾಡಿರಿ. ನಮ್ಮ ಮಾಯಾಮತದ ಗೌರವವನ್ನು ಉಳಿಸಿದ ಗುರುತರವಾದ ಹೊಣೆಯು ನಿಮ್ಮ ಮೇಲೆಯೇ ಇರುತ್ತದೆ.

ಎಲ್ಲಾ ಶಾಸ್ತ್ರಗಳನ್ನೂ ತಳದಿಂದ ತುದಿಯ ವರೆಗೂ ತಲಕಾಡಿ ವಿಮರ್ಶಿಸಿ ಅವುಗಳಲ್ಲೆಲ್ಲ ಪೂರ್ಣ ಪ್ರಭುತವವ್ನು ಸಂಪಾದಿಸಿದ ಶ್ರೀ ತ್ರಿವಿಕ್ರಮರಿಗೆ ವಾದ ಮಾಡುವುದೂ - ಎದುರಾಳಿಗಳನ್ನು ಸುಲಭವಾಗಿ ಸೋಲಿಸುವುದೂ ಸ್ವಲ್ಪ ಸಮಯದಲ್ಲಿಯೇ ಎಂಥ ದಿಗ್ಗಜ ಪಂಡಿತರನ್ನೂ ಮಾತಿನ ಮಲಕಿನಲ್ಲಿ ಹಿಡಿದು ಮೂಕನನ್ನಾಗಿಸುವದೂ ಕರಗತವಾದ ಕೌಶಲ್ಯವಾಗಿತ್ತು.

ಆದುದರಿಂದ ಅವರು ತಮ್ಮ ಅನುಯಾಯಿಗಳಾದ ಮಾಯಿ ಜನರಿಗೆ.....

" ನಾನು ಮಧ್ವ ಮತವನ್ನು ನಿರಾಕರಣೆ ಮಾಡಲು ಬರುತ್ತೇನೆ "

ಎಂದು ಧೈರ್ಯ ಹೇಳಿದರೂ ಮತ್ತುಅನೇಕ ಮಧ್ವ ಮತಾನುಯಾಯಿ ಪಂಡಿತರನ್ನು ತಮ್ಮ ವಾದ ಪಾಂಡಿತ್ಯದಿಂದ ಪಾಂಡಿತ್ಯದಿಂದ ಖಂಡಿಸಿ ಉತ್ತರ ರೂಪವಾಗಿ ಅನೇಕ ಬಗೆಯ ಜಾಣ್ಮೆಯ ನುಡಿಯ ಪುಡಿ ಕಿಡಿಗಳನ್ನು ತೋರಿ ಅವರೆಲ್ಲರನ್ನೂ ಕಂಗೆಡಿಸಿದ್ದರು.

ಆದರೆ ಶ್ರೀ ತ್ರಿವಿಕ್ರಮ ಪಂಡಿತರಿಗೆ ಮನಸ್ಸಿನಲ್ಲಿ ಆತ್ಮ ವಿಶ್ವಾಸ ಬರಲಿಲ್ಲ : ಶ್ರೀ ಸರ್ವಜ್ಞರನ್ನು ಜಯಿಸಬಲ್ಲೆನೆಂದು ".

ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರ - ತಮ್ಮನಾದ ಶ್ರೀ ಪೆಜ್ಜತ್ತಾಯ ಶಂಕರಾಚಾರ್ಯರು ಈ ಮೊದಲೇ ಶ್ರೀ ಸರ್ವಜ್ಞಾಚಾರ್ಯರ ಶಿಷ್ಯರಾಗಿ - ಅವರ ಗ್ರಂಥಾಗಾರದ ಪಾಲಕರಾಗಿದ್ದರು.

ಶ್ರೀ ಪೆಜ್ಜತ್ತಾಯ ಶಂಕರಾಚಾರ್ಯರು - ಶ್ರೀ ಪೂರ್ಣಪ್ರಜ್ಞರು ಬರೆದ ಅಗಮ್ಯವಾದ ದಿವ್ಯ ಗ್ರಂಥಗಳನ್ನು ತಂದು ತಮ್ಮ ಮನೆಯಲ್ಲಿ ಇಟ್ಟಿರುತ್ತಿದ್ದರು.

ಮನೆಯಲ್ಲಿ ಎಲ್ಲರೂ ಮಲಗಿದ ಮೇಲೆ ಶ್ರೀ ತ್ರಿವಿಕ್ರಮರು ಎದ್ದು ಆ ಶ್ರೀ ಸರ್ವಜ್ಞರ ಗ್ರಂಥಗಳ ಕಟ್ಟನ್ನು ಬಿಚ್ಚಿ ಒಲೆಗಳನ್ನು ಬಿಡಿಸಿ ಮೆಲ್ಲನೆ ಓದ ತೊಡಗಿದರು.

ಶ್ರೀ ಸರ್ವಜ್ಞಾಚಾರ್ಯರ ಆ ದಿವ್ಯ ಭವ್ಯ ಗ್ರಂಥಗಳನ್ನು ಓದಿದಾಗ ವಿದ್ವದ್ವರೇಣ್ಯರಿಗೆ ಜ್ಞಾನದ ತವನಿಧಿಯೇ ದೊರಕಿದಂತಾಯಿತು.

ಅನೇಕ ವರ್ಷಗಳ ಹಿಂದೆ ಅವರ ಮನಸ್ಸನ್ನು ಕಾಡಿಸಿದ ಪ್ರಶ್ನೆಗಳಿಗೆಲ್ಲಾ ಆ ಶ್ರೀ ಸರ್ವಜ್ಞರ ಗ್ರಂಥಗಳಲ್ಲಿ ಸಮಾಧಾನಕಾರಕವಾದ ಉತ್ತರಗಳು ಕಂಡು ಬಂದವು.

ಜ್ಞಾನ ಪ್ರಪಂಚದಲ್ಲಿ ಶತಕಾನುಶತಕಗಳಿಂದ ಬಿಡಿಸಲು ಬಾರದ ಒಗಟುಗಳಾಗಿ ನಿಂತುಕೊಂಡ ಸಮಸ್ಯೆಗಳಿಗೆಲ್ಲ ಈ ಮಧ್ವ ಗ್ರಂಥಗಳಲ್ಲಿ ಸಮಂಜಸವಾದ ಪರಿಹಾರವಿದ್ದಿತು.

ಅದನ್ನು ಕಂಡು ಸ್ವಯಂ ಶ್ರೇಷ್ಠ ಪಂಡಿತರಾದ ಪಂಡಿತಾಚಾರ್ಯರಿಗೆ ಶಾಂತಿಯೂ ಸಿಕ್ಕಿತು - ಸಮಾಧಾನವೂ ಆಯಿತು.

ಅವರು ಆನಂದದಿಂದ ನೇರವಾಗಿ ಎದ್ದು ವಿಷ್ಣುಮಂಗಲಕ್ಕೆ ಬಂದು - ಅಲ್ಲಿ ವೇದಾಂತ ಪ್ರವಚನವನ್ನು ಗೈಯುತ್ತಿದ್ದ ಶ್ರೀ ಆನಂದತೀರ್ಥರ ಪಾದಾರವಿಂದಗಳಿಗೆ ಸಾಷ್ಟಾಂಗ ವಂದಿಸಿದರು.

ಅವರ ಪ್ರತಿಯೊಂದು ಭಾವಭಾವದಲ್ಲಿಯೂ ತತ್ತ್ವ ಜಿಜ್ಞಾಸೆಯ ಹಂಬಲವು ಹೊಮ್ಮುತ್ತಿತ್ತು.

ಶ್ರೀ ತ್ರಿವಿಕ್ರಮರು - ಶ್ರೀ ಪೂರ್ಣಬೋಧರ ಜೊತೆಗೆ ಅನೇಕ ಪ್ರಮೇಯಗಳ ವಿಷಯದಲ್ಲಿ ಚರ್ಚೆ ನಡೆಸಿದರು.

ವೇದಾಂತ ವಿಷಯಗಳಲ್ಲಿ ವಾಕ್ಯಾರ್ಥವನ್ನು ಮಾಡಿದರು.

" ಶ್ರೀ ಮಧ್ವಾಚಾರ್ಯರ ಮತವೇ ನಿರ್ದುಷ್ಟವಾದ ಮತ " ಎಂದು ಶ್ರೀ ತ್ರಿವಿಕ್ರಮರಿಗೆ ಖಚಿತವಾಯಿತು.

ಇಷ್ಟಾದರೂ ಅವರಿಗೆ ತಮ್ಮ ಮಾಯಾವಾದ ಮತವನ್ನು ಬಿಟ್ಟು ಬಿಡಲಿಕ್ಕೆ ಆಗಲಿಲ್ಲ.

ಮಧ್ವ ಮತವನ್ನು ಅವರು ಅಂಗೀಕರಿಸಲಿಲ್ಲ.

ಸಾರಾಸಾರ ವಿಚಾರ ಮಾಡಿ ನಿರ್ಣಯ ಕೈಕೊಳ್ಳುವುದೇ ಪಂಡಿತರ ಲಕ್ಷಣವಲ್ಲವೇ??

" ಶ್ರೀಮದಾನಂದತೀರ್ಥ ಭಗವತ್ಪಾದರ ವಿದ್ಯಾ ವೈಭವ "

ಒಂದುದಿನ ಶ್ರೀ ಮಧ್ವಾಚಾರ್ಯರು " ತಾಡಿಕೂಡೆಲ್ " ಎಂಬ ಊರಿನಲ್ಲಿ " ಕೂಡೆಲ್ " ಎಂಬ ದೇವಸ್ಥಾನದಲ್ಲಿ ಕೂಡಿದ ಪ್ರಚಂಡ್ರ ಜನಸ್ತೋಮದೆದುರು ತಮ್ಮ " ದ್ವೈತ ಭಾಷ್ಯ " ವನ್ನು ಪ್ರವಚನ ಮಾಡುತ್ತಿದ್ದರು.

ಸಭೆಯಲ್ಲಿ ದಿಗ್ ದೇಶಗಳ ದಿಗ್ದಂತಿ ಪಂಡಿತರೆಲ್ಲರೂ ನೆರೆದಿದ್ದರು.
ಅವರ ಎದುರು ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರು ಪ್ರತಿವಾದಿ ಪಂಡಿತರಾಗಿ ಶ್ರೀಮದಾಚಾರ್ಯರನ್ನು ಎದುರಿಸುವ ಸನ್ನಾಹದಲ್ಲಿ ನಿಂತು ಕೊಂಡಿದ್ದರು.
ಮಾಯಾವಾದದ ಮಹಾ ರಥವನ್ನು ಏರಿ - ತರ್ಕಾಯುಧವನ್ನು ಹಿಡಿದು ತಮ್ಮ ಮೇಲೆ ಎರಗುವ ಸಿದ್ಧತೆಯಲ್ಲಿದ್ದ ತ್ರಿವಿಕ್ರಮ ಪರಾಕ್ರಮಿಗಳನ್ನು ಕಂಡು ಶಾಸ್ತ್ರದ ಸಾಣೆ ಹಿಡಿದು ಹದನವಾದ ಶ್ರೀಮದಾಚಾರ್ಯರ ವಾಣಿಯು ಬಾಣದಂತೆ ಹೊರಬಿದ್ದಿತು.
ಬ್ರಹ್ಮಸೂತ್ರಗಳೆಂಬ ರಥ;
ವೇದ - ಮಂತ್ರಗಳೆಂಬ ಗಜ;
ಸ್ಮೃತಿ ವಚನಗಳೆಂಬ ಕುದುರೆ;
ನಿರ್ದುಷ್ಟ - ತರ್ಕಗಳೆಂಬ ಸೈನಿಕರು;
ಹೀಗೆ ಚತುರಂಗ ಬಲ ಸಹಿತವಾಗಿ ಶ್ರೀಮದಾಚಾರ್ಯರ ತತ್ತ್ವ ನಿರ್ಣಾಯಕವಾದ ಸಮರವು ಆರಂಭವಾಯಿತು.
ಗಂಗಾ ಪ್ರವಾಹದಂತೆ ನಿರರ್ಗಳವಾಗಿ ಹರಿಯಿತು ಶ್ರೀಮದಾಚಾರ್ಯರ ಅಂದಿಂದ ಉಪನ್ಯಾಸ ಭಾರತಿ.
ಮಾತು ಮಾತಿಗೆ ವೇದ - ಮಂತ್ರಗಳ ಸಮಾಖ್ಯೆಯನ್ನೂ;
ವೇದೋಪನಿಷತ್ತುಗಳ ಸಂವಾದವನ್ನೂ;
ಯುಕ್ತಿಯ ಬೆಂಬಲವನ್ನೂ ಉದಾಹರಿಸುತ್ತಾ...
ವೇದ ಗಂಭೀರವಾದ ಧ್ವನಿಯಿಂದ ಸುಸ್ಪಷ್ಟವಾದ ಶೈಲಿಯಲ್ಲಿ ವೇದ - ವೇದಾಂತಗಳ ರಹಸ್ಯವನ್ನೆಲ್ಲ ತಿಳಿಸುತ್ತಾ, " ಬ್ರಹ್ಮ ಮೀಮಾಂಸಾ ಶಾಸ್ತ್ರ " ದ ಮೇಲೆ ನಡೆಸಿದ ಶ್ರೀಮದಾಚಾರ್ಯರ ಅಮೋಘ ಪ್ರವಚನವನ್ನು ಕೇಳಿ ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರು ತಬ್ಬಿಬ್ಬಾಗಿ ಸುಸ್ತೋ ಸುಸ್ತಾಗಿ ಹೋದರು.
ಹೆದ್ದೆರೆಗಳಿಂದ ಘೂರ್ಮಿಸುವ ಸಮುಂದ್ರಕ್ಕೆ ತೆಕ್ಕೆಮೂಕ್ಕೆ ಬಿದ್ದಂತೆ ಎನಿಸಿತು ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರಿಗೆ..
ಶ್ರೀ ಸರ್ವಜ್ಞಾಚಾರ್ಯರು....

ನಾರಾಯಣನು ಗುಣಪರಿಪೂರ್ಣನು - ವೇದ ಪ್ರತಿಪಾದ್ಯನಾದ " ಪರಬ್ರಹ್ಮ " ನೆಂದರೆ ಅವನೇ - ಈ ಪ್ರಪಂಚಕ್ಕೆ ಸೃಷ್ಟ್ಯಾದ್ಯಷ್ಟ ಕರ್ತನು ಅವನ ಹೊರತು ಬೇರೆ ಯಾರೂ ಇಲ್ಲ. ಈ ಜಗತ್ತಿನ ನಿರ್ದೋಷ ವಸ್ತುವೆಂದರೆ ನಾರಾಯಣನೊಬ್ಬನೇ. ಅವನೇ " ಸರ್ವಜ್ಞ " ಯೆಂದು ಯುಕ್ತಿಯಿಂದ ಸಾಧಿಸಿದರು. ಅದಕ್ಕೆ ಬೆಂಬಲವಾಗಿ ಅನೇಕ ವೇದಾದಿ ಉಕ್ತಿಗಳನ್ನು ಉದಾಹರಿಸಿದರು.

ಇದಕ್ಕೆ ವಿರುದ್ಧವಾದ...

ಸಾಂಖ್ಯ, ವೈಶೇಷಿಕ, ನೈಯಾಯಿಕ, ಭಾಸ್ಕರ, ಬೌದ್ಧ, ಮಾಯಾಮತಾದಿ ವಾದಗಳನ್ನೆಲ್ಲಾ ಮೊದಲು ತಾವು ಅನುವಾದ ಮಾಡಿ ಅನಂತರ ಅವುಗಳನ್ನು ಒಂದೊಂದಾಗಿ ಅಕ್ಷರಸಃ ಖಂಡಿಸಿದರು.

ಶ್ರುತಿ - ಸ್ಮೃತಿ ಸಿದ್ಧವಾದ ವೇದ ಮತವನ್ನು ಸೋಪಪತ್ತಿಕವಾಗಿ ಮಂಡಿಸಿದರು.

ಸದ್ಗತಿಯನ್ನೂ, ಮೋಕ್ಷವನ್ನೂ ಬಯಸುವವರೆಲ್ಲ ವೇದೈಕ್ಯ ವೇದ್ಯನಾದ ಶ್ರೀ ವಿಷ್ಣುವನ್ನು ಉಪಾಸನೆ ಮಾಡಿ ಒಲಿಸಿ ಕೊಳ್ಳಬೇಕು.

ಶ್ರೀ ಹರಿಯ ಪ್ರಸಾದದಿಂದಲೇ ಜೀವರಿಗೆ ಮೋಕ್ಷ.

ಶ್ರೀ ಹರಿ ಅಪರೋಕ್ಷ ಜ್ಞಾನದಿಂದ ನಿತ್ಯ ಸುಖ ರೂಪವಾದ ಮೋಕ್ಷವು ದೊರೆಯುತ್ತದೆ.

ಅದಕ್ಕಾಗಿ ಶ್ರೀ ಹರಿಯನ್ನು ನಿತ್ಯ ನಿರಂತರವೂ ಭಕ್ತಿಯಿಂದ ಧ್ಯಾನ ಮಾಡಬೇಕು.

ಶ್ರೀ ಮಧ್ವ ಮುನಿಗಳ ಪಾಂಡಿತ್ಯಪೂರ್ಣವೂ - ಯುಕ್ತಿಜಾಲಬದ್ಧವೂ - ಪ್ರಮಾಣ ಪರಿಭ್ರಂಹಿತವೂ ಆದ ಈ ಉಪನ್ಯಾಸವನ್ನು ಕೇಳಿ - ಸಭಿಕೆಲ್ಲರೂ ಆನಂದ ಪರವಶರಾದರು.

ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರಿಗೂ ಶ್ರೀ ಸರ್ವಜ್ಞಾಚಾರ್ಯರ ಜ್ಞಾನದ ಉಚ್ಚ ಮಟ್ಟವನ್ನೂ - ಅದರ ಆಳ ಅಗಲಗಳನ್ನೂ ಅಂಶತಃ ನೋಡಿ ಅತ್ಯಂತ ಆಶ್ಚರ್ಯವೆನಿಸಿತು.

ಆದರೂ ಶ್ರೀ ಪಂಡಿತಾಚಾರ್ಯರು ಮಾಯಾವಾದ ಸಂಸ್ಕಾರಾನುಗುಣವಾಗಿ ಮಾಯಾವಾದವನ್ನು ಮಂಡಿಸಿದರು.

ಶ್ರೀಮದಾಚಾರ್ಯರ ಮೇಲೆ ತಮ್ಮ ಬುದ್ಧಿಯ ಬಿಲ್ಲಿಗೆ ಯುಕ್ತಿ ಬಾಣಗಳನ್ನು ಹೂಡಿ ಬಿಟ್ಟರು.

ಅದನ್ನು ಕೇಳಿ ಶ್ರೀಮದಾಚಾರ್ಯರು ಸುಂದರವಾಗಿ ಮಂದಹಾಸ ಬೀರುತ್ತಾ - ತ್ರಿವಿಕ್ರಮರ ಎಲ್ಲ ತರ್ಕಗಳಿಗೂ ಪ್ರತಿ ತರ್ಕಗಳನ್ನು ಹೇಳಿ ಕೊಚ್ಚಿ ಹಾಕಿದರು.

ಶ್ರೀ ಅನುಮಾನತೀರ್ಥರ ತರ್ಕ ಕೌಶಲ್ಯದಿಂದ ಸೋತು ಮಾತು ನಿಂತು ಹೋದ ಶ್ರೀ ಪಂಡಿತಾಚಾರ್ಯರು ಯುಕ್ತಿಗಳ ಕೈ ಬಿಟ್ಟು ತಮ್ಮ ಮಾಯಾವಾದಕ್ಕೆ ಉಪಷ್ಟಂಭಕವಾಗಿ ಅನೇಕ ವೇದ - ಮಂತ್ರಗಳನ್ನೂ - ಪಾಶುಪತ್ಯಾದ್ಯಾಗಮಗಳನ್ನೂ ಉದಾಹರಿಸ ತೊಡಗಿದರು.
ಕೂಡಲೇ ಶ್ರೀಮದಾಚಾರ್ಯರು ಪಂಡಿತಾಚಾರ್ಯರ ಪ್ರವಚನಗಳಿಗೆಲ್ಲ ಅರ್ಥಾಂತರವನ್ನು ಅರ್ಥಾತ ನಿಜಾರ್ಥವನ್ನು ಹೇಳಿ ಅವೆಲ್ಲವೂ ಸಾವಕಾಶ ಪ್ರಾಮಾಣವೆಂದು ಪ್ರಕಾಶ ಪಡಿಸಿದರು.
ಮಾಯಾವಾದದ ಪ್ರತಿಯೊಂದು ತತ್ತ್ವ - ವೇದ ವಿರುದ್ಧ ಯನ್ನುವುದಕ್ಕೆ ಅನೇಕಾನೇಕ ನಿರವಕಾಶವಾದ ಪ್ರಜ್ವಲ ಪ್ರಮಾಣವೆನಿಸಿದ ವೇದ ವಚನಗಳನ್ನೂ ಉದಾಹರಿಸಿ ಮಾಯಾವಾದವನ್ನು ಖಂಡಿಸಿದರು.
ಉಪಕ್ರಮಾದಿ ತಾತ್ಪರ್ಯಗಳಿಂದ " ವಿಷ್ಣು ಸರ್ವೋತ್ತಮತ್ವ - ಪಂಚ ಭೇದ ತಾರತಮ್ಯಾದಿ ದ್ವೈತ ಸಿದ್ಧಾಂತವೇ ವೇದ ಸಿದ್ಧಾಂತ " ವೆಂದು ಸಯುಕ್ತಕವಾಗಿಯೂ - ಸಪ್ರಮಾವಾಗಿಯೂ ಸಿದ್ಧ ಮಾಡಿ ತೋರಿಸಿದರು.
ಹೀಗೆ ಶ್ರೀ ಸರ್ವಜ್ಞರ - ಶ್ರೀ ತ್ರಿವಿಕ್ರಮರ ವಾದ 15 ದಿನಗಳ ವರೆಗೆ ಸಾಗಿತು. ಕೊನೆಗೆ ಪ್ರಾಮಾಣಿಕರಾದ ಶ್ರೀ ಪಂಡಿತಾಚಾರ್ಯರು ನಿರುತ್ತರರಾಗಿ ಆ ಜ್ಞಾನ ಮೇರುವಿನ ಎದುರು ತಮ್ಮ ಸೋಲನ್ನು ಪ್ರಾಂಜಲವಾಗಿ ಒಪ್ಪಿಕೊಂಡರು.
ಸೋಲಿನಲ್ಲಿ ಸುಖವನ್ನು ಕಂಡ ಸಚ್ಚೇತನರಲ್ಲಿ ಶ್ರೀ ತ್ರಿವಿಕ್ರಮ ಪಂಡಿತಾಚಾರೊಬ್ಬರು.
ಶ್ರೀ ತ್ರಿವಿಕ್ರಮರ ಕಣ್ಣುಗಳಿಂದ ಆನಂದ ಬಾಷ್ಪಗಳು ಉದಾರಿ ಬಂದವು.
ಕೊರಳು ಬಿಗಿದು ಬಂದಿತು. ಎಂದಿನಿಂದಲೂ ಮಿದುಳಿನಲ್ಲಿ ಕೂಡಿ ಬಿದ್ದ ಸಂದೇಹಗಳ ಕಗ್ಗಂಟುಗಳು ತಾವಾಗಿ ಬಿಚ್ಚಿಕೊಂಡವು.
ಆಗ ಅವರು ಶ್ರೀಮದಾಚಾರ್ಯರ ಪಾದಗಳಿಗೆ ಸಾಷ್ಟಾಂಗ ವಂದನೆ ಗೈದು...
" ಪರಮಪೂಜ್ಯರೆ, ಈ ನನ್ನ ವಾದ ಚಾಪಲ್ಯವನ್ನು ಕ್ಷಮಿಸಬೇಕು. ತಮ್ಮ ಪಾದಪದ್ಮಗಳ ಧೂಳಿ ದಾಸ್ಯವನ್ನು ಕೊಟ್ಟು ನನ್ನನ್ನು ಅನುಗ್ರಹಿಸಬೇಕು "
ಎಂದು ಪ್ರಾರ್ಥಿಸಿಕೊಂಡರು.
ಆಗ ನೆರೆದ ಸಭಿಕರೆಲ್ಲರೂ ಆನಂದ ಉದ್ರೇಕದಿಂದ " ಶ್ರೀಮದಾನಂದತೀರ್ಥ ಗುರುಭ್ಯೋ ನಮಃ " ಎಂದು ಜಯ ಘೋಷ ಮಾಡಿದರು.
" ವೈಷ್ಣವ ದೀಕ್ಷೆ ಮತ್ತು ತಪ್ತ ಮುದ್ರಾಧಾರಣೆ ಸ್ವೀಕರಿಸಿದ ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರು "

ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರು - ಶ್ರೀ ಶ್ರೀಮದಾಚಾರ್ಯರ ಶಿಷ್ಯರಾಗಿ ಅವರಲ್ಲಿ ವೈಷ್ಣವ ದೀಕ್ಷೆಯನ್ನು ಪಡೆದುಕೊಂಡು ತಪ್ತ ಮುದ್ರಾಧಾರಣೆಯಿಂದ ಧನ್ಯರಾದರು ಮತ್ತು ಆಚಾರ್ಯರಲ್ಲಿ ಅತ್ಯಂತ ಭಕ್ತಿಯಿಂದ " ಶಿಷ್ಯಸ್ತೇಹಂ " ಎಂದು ಶಾಂತಿ ಹಾಕಿ ಅವರ ಬಾಯಿಂದ ಬ್ರಹ್ಮಸೂತ್ರ ಭಾಷ್ಯವನ್ನು ಸಂಪೂರ್ಣವಾಗಿ ಶ್ರವಣ ಮಾಡಿದರು.

ಶ್ರೀಮದಾಚಾರ್ಯರ ಗ್ರಂಥಗಳನ್ನು ಓದಿದಂತೆಲ್ಲ ಹೊಸದಾದ ಒಂದು ಬೆಳಕಿನ ಭಾಂಡಾರವೇ ತಮ್ಮ ಕೈವಶವಾದಂತಾಯಿತು ಶ್ರೀ ತ್ರಿವಿಕ್ರಮರಿಗೆ.

ಶ್ರೀ ಮಧ್ವ ಮುನಿಗಳ ಆ ಭಾಷ್ಯವನ್ನು ಕೇಳಿದ ಬಳಿಕ ಅವರ ತಲೆಯಲ್ಲಿ ದಿವ್ಯ ಜ್ಞಾನದ ತುಂಬು ತಡಸಲವೇ ತುಳಿಕಿದಂತಾಯಿತು.

" ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರ ವದನಾರವಿಂದದಲ್ಲಿ ಹೊರಹೊಮ್ಮಿದ - ಸರ್ವಮೂಲ ಗ್ರಂಥಗ ಮಹಿಮೆ "

ಶ್ರೀ ಸರ್ವಜ್ಞಾಚಾರ್ಯರ ಅಪ್ಪಣೆಯಂತೆ ಶ್ರೀ ತ್ರಿವಿಕ್ರಮ ಪಂಡಿತರು ಶ್ರೀ ಮಧ್ವ ಭಾಷ್ಯದಲ್ಲಿ ತಾವು ಕಂಡ ಸೊಬಗನ್ನೂ, ಉಂಡ ಸವಿಯನ್ನೂ ಜನ ಸಾಮಾನ್ಯರಿಗೆಲ್ಲ ತಿಳಿಸುವುದಕ್ಕಾಗಿ " ತತ್ತ್ವಪ್ರದೀಪ " ಎಂಬ ಶ್ರೀ ಮಧ್ವ ಭಾಷ್ಯದ ಟೀಕೆಯನ್ನು ಬರೆದರೂ.

ಶ್ರೀ ತ್ರಿವಿಕ್ರ ಪಂಡಿತಾಚಾರ್ಯರ ಈ ಭಾಷ್ಯ ಟೀಕೆಯು ವೇದಾಂತ ಪ್ರಪಂಚದಲ್ಲಿ ಸರ್ವ ಮಾನ್ಯವಾದ ಉತ್ಕೃಷ್ಟ ಗ್ರಂಥವಾಗಿದೆ.

ಶ್ರೀ ಜಯತೀರ್ಥರ ಮಧ್ವ ಭಾಷ್ಯಕ್ಕೆ ವಿರಚಿಸಿದ " ತತ್ತ್ವಪ್ರಕಾಶಿಕಾ " ಅದಕ್ಕೆ " ಚಂದ್ರಿಕಾ " ಅವುಗಳಿಗೆ " ಪ್ರಕಾಶ " " ಭಾವದೀಪ " ಭಾಷ್ಯದೀಪಿಕಾ " " ತಂತ್ರದೀಪಿಕಾ " ಮುಂತಾದ ಸೂತ್ರ ಪ್ರಸ್ಥಾನವು ಸಾಕಷ್ಟು ಬೆಳೆದಿದ್ದರೂ, ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರ " ತತ್ತ್ವಪ್ರದೀಪ " ಗ್ರಂಥವು ಗತಾರ್ಥವಾಗಲಿ, ವ್ಯರ್ಥವಾಗಲಿ ಎನಿಸುವುದಿಲ್ಲ.

ಸಾಕ್ಷಾತ್ ಶ್ರೀಮದಾಚಾರ್ಯರ ಮುಖದಿಂದಲೇ ಭಾಷ್ಯ ಶ್ರವಣವನ್ನು ಮಾಡಿ ಅವರ ಭಾವಾಭಿವ್ಯಂಜನವನ್ನು ಚನ್ನಾಗಿ ಮಾಡಿದ " ತತ್ತ್ವಪ್ರದೀಪ " ವು ಇಂದಿಗೂ ಅನನ್ಯ ಸಾಮಾನ್ಯವಾದ ತನ್ನ ವೈಶಿಷ್ಟ್ಯವನ್ನು ಕಾಯ್ದುಕೊಂಡಿದೆ.

ಪಾವನ ಗುರುಗಳ ಶಿಷ್ಯತ್ವವನ್ನು ಅಂಗೀಕರಿಸಿದ ಬಳಿಕ ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರು ಶ್ರೀಮನ್ಮಧ್ವಾಚಾರ್ಯ ಎಲ್ಲ ಗ್ರಂಥಗಳನ್ನೂ ಅಧ್ಯಯನ ಮಾಡಿದರು.

ಒಂದೊಂದು ಅನರ್ಘ್ಯ ರತ್ನವಾಗಿ ತೋರಿದವು ಆ ವಿದ್ವದ್ಬುದ್ಧಿಗೆ.

ಹೋದ ಹೋದಲ್ಲೆಲ್ಲ ಮಧ್ವ ಗ್ರಂಥಗಳ ಹಿರಿಮೆಯನ್ನು ಮುಕ್ತಕಂಠದಿಂದ ಹೋಗಲಿ ಹೇಳುತ್ತಿದ್ದರು.

" ಶ್ರೀ ಸರ್ವಜ್ಞಾಚಾರ್ಯರ ಗ್ರಂಥ ವೈಭವ "

ಶ್ರೀಮದಾಚಾರ್ಯರ ಗ್ರಂಥಗಳ ವೈಷ್ಟ್ಯ ಹಾಗೂ ಮಹತ್ವಗಳ ಬಗೆಗೆ ಅವರು ಒಂದು ಸಭೆಯಲ್ಲಿ ಇತ್ತ ಉಪನ್ಯಾಸದ ಸೊಬಗನ್ನು ನೋಡಿರಿ.....

ಶ್ರೀಮದಾನಂದತೀರ್ಥರು ಬರೆದ ಬ್ರಹ್ಮಸೂತ್ರ ಭಾಷ್ಯವೆಂದರೆ ಅದೊಂದು " ರಸ ರತ್ನಾಕರ ". ಆ ಸಾಗರದ ಆಳದಲ್ಲಿ ಇಳಿದು ಎಷ್ಟು ಮಣಿಗಳನ್ನು ಹೊರಗೆ ತೆಗೆದರೂ ಅವು ಮುಗುಯುವುದಿಲ್ಲ. ಅಸಂಖ್ಯ ಯುಕ್ತಿ ರತ್ನಗಳ ಆಗರ ಅದು.

ಶ್ರೀ ಸರ್ವಜ್ಞಾಚಾರ್ಯರು ರಚಿಸಿದ ದಶೋಪನಿಷತ್ತುಗಳ ಭಾಷ್ಯಗಳ ಅರ್ಥ ಪ್ರತಿಪಾದನೆಯ ಸೊಗಸೇ ಬೇರೆ.

ಶ್ರೀ ಗುರು ಮಧ್ವರು ರಚಿಸಿದ ಗೀತಾಭಾಷ್ಯ, ಗೀತಾ ತಾತ್ಪರ್ಯ ಎಂಬ ಎರಡು ಗ್ರಂಥಗಳು ವೇದಾಂತ ವಿಶ್ವದಲ್ಲಿ ಚಂದ್ರ ಸೂರ್ಯರಂತೆ ತಮ್ಮ ಕಾಂತಿಯಿಂದ ಬೆಳಗುತ್ತಿದೆ.

ಇತಿಹಾಹಾಸ ಪುರಾಣಗಳ ಸಾಗರವನ್ನು ಶ್ರೀ ಮಧ್ವರು ತಮ್ಮ ಮನೋಮಂದಿರವನ್ನಿಟ್ಟು ಮಂಥನ ಮಾಡಿ ಕಡೆದು ತೆಗೆದ ಅಮೃತವೇ ಮಹಾಭಾರತ ತಾತ್ಪರ್ಯ ನಿರ್ಣಯವು. ಅದನ್ನು ಯಾವ ಪುಣ್ಯಾತ್ಮನು ಸೇವಿಸಲಿಕ್ಕಿಲ್ಲ.

ಗುಹ್ಯಭಾಷೆ - ದೇವಭಾಷೆ - ಸಮಾಧಿ ಭಾಷೆ ಎಂದು ಮೂರು ವಿಧವಾದ ಭಾಷಾ ಪ್ರಭೇದವನ್ನು ತಿಳಿಯದೆ ಪೌರಾಣಿಕ ಪಥದಲ್ಲಿ ತಡವರಿಸುವವರಿಗೆ ಶ್ರೀಮದಾಚಾರ್ಯರು ರಚಿಸಿದ ಭಾಗವತ ತಾತ್ಪರ್ಯ ನಿರ್ಣಯ ಗ್ರಂಥವು ಮಿತ್ರನಂತೆ ಮಾರ್ಗದರ್ಶನ ಮಾಡಿಸುವದು.

ಶ್ರೀ ಆನಂದತೀರ್ಥ ಭಗವತ್ಪಾದರ ತಂತ್ರಸಾರ ಗ್ರಂಥವಂತೂ ಬಯಸಿದ್ದನ್ನು ಕೊಡುವ ಕಲ್ಪವೃಕ್ಷದಂತಿದೆ. ಅದರಲ್ಲಿ ಹೇಳಿದಂತೆ ನಡೆದರೆ ಇಷ್ಟಾರ್ಥ ಸಿದ್ಧಿ ಪಡೆಯದವನಾರು !

ಪ್ರತ್ಯಕ್ಷವೇ ಮೊದಲಾದ ಮೂರು ಪ್ರಮಾಣಗಳ ಉದ್ದೇಶ ವಿಭಾಗ, ಲಕ್ಷಣಗಳನ್ನು ತಿಳಿದುಕೊಳ್ಳಲಿಕ್ಕೆ ಅನುಕೂಲವಾದ ಪ್ರಮಾಣ ಲಕ್ಷಣ ಮತ್ತು ಕಥಾ ಲಕ್ಷಣ ಎಂಬ ಎರಡು ಗ್ರಂಥಗಳು ದಿವ್ಯ ಕಣ್ಣುಗಳಂತೆ ಇವೆ.

ಶ್ರೀ ಆನಂದತೀರ್ಥರ ತತ್ತ್ವ ನಿರ್ಣಯ ಗ್ರಂಥವಂತೂ ಪ್ರತಿ ಪಕ್ಷಿಗಳ ತಲೆಯ ಮೇಲ ಕಾಲಿರಿಸಿ ಎಲ್ಲರನ್ನೂ ಗೆದ್ದ ಅರ್ಜುನನಂತೆ ವೇದಾಂತ ಪ್ರಪಂಚದಲ್ಲಿಯ ಪ್ರತಿವಾದಿಗಳ ವಿಧಾನಗಳನ್ನೆಲ್ಲ ಖಂಡತುಂಡವಾಗಿ ನಿರಾಕರಣ ಮಾಡುತ್ತದೆ.

ಇಂಥಾ ಶ್ರೀ ಗುರು ಮಧ್ವರಾಯರ ಶ್ರೀ ವಿಷ್ಣು ತತ್ತ್ವ ನಿರ್ಣಯ ಕೃತಿಯನ್ನು ಪೂಜಿಸದವರಾರು?
ಇದರಂತೆ ಮಾಯಾವಾದಖಂಡನ, ತತ್ತ್ವೋದ್ಯೋತ ಮುಂತಾದ ಶ್ರೀಮದಾಚಾರ್ಯರ ಪ್ರಕರಣ ಗ್ರಂಥಗಳು ಬೆಂಕಿಯ ಕಿಡಿಗಳಂತೆ ಕಾಣಲು ಚಿಕ್ಕದಾದರೂ ಮಧ್ವ ಮಾರುತಿಯಿಂದ ಪ್ರೇರಿತವಾಗಿ, ವಾದಿವಾದ ಪ್ರಸ್ಥಾನಗಳನ್ನೆಲ್ಲ ಖಂಡಿಸಿ ಹಾಕಲು ಸಮರ್ಥವಾಗಿರುತ್ತವೆ.
ಶ್ರೀ ಪೂರ್ಣಪ್ರಜ್ಞರು ರಚಿಸಿದ ಅಣುಭಾಷ್ಯದಲ್ಲಿ ಅನಂತ ಅರ್ಥವೂ ಅಡಗಿದೆ. ಶ್ರೀ ಕೃಷ್ಣನು ತನ್ನ ಪುಟ್ಟ ಬಾಯಲ್ಲಿ ಬ್ರಹ್ಮಾಂಡವನ್ನೇ ತೋರಲಿಲ್ಲವೇ !
ಚಿತ್ರ ಕಾವ್ಯದ ಶೈಲಿಯಲ್ಲಿ ಬರೆದ ಶ್ರೀಮದಾಚಾರ್ಯರ ಯಮಕಾಭಾರತ ಎಂಬ ಗ್ರಂಥದಲ್ಲಿ ಮಹಾಭಾರದ ಸಾರವನ್ನೆಲ್ಲ ಸಂಕ್ಷೇಪವಾಗಿ ನಿರೂಪಿಸಿದ್ದು ಶ್ರೀ ಸರ್ವಜ್ಞರ ಕಾವ್ಯ ಕಲಾ ಕೌಶಲ್ಯಕ್ಕೂ, ಕಿರಿದರಲ್ಲಿ ಪಿರಿದರ್ಥ ಹೇಳುವ ಅವರ ಜಾಣ್ಮೆಗೂ ನಿದರ್ಶನವಾಗಿದೆ.
ಇವಲ್ಲದೆ ಬಗೆ ಬಗೆಯ ಸುಭಾಷಿತಗಳೂ, ಸೂತ್ರಗಳೂ, ಗೀತೆಗಳೂ, ಗಾಥೆಗಳೂ ಇವೆ ಮೊದಲಾದ ರಸಭರಿತ ಅನೇಕ ಕೃತಿಗಳನ್ನು ಶ್ರೀ ಸರ್ವಜ್ಞತೀರ್ಥರು ರಚಿಸಿದ್ದು ಅವುಗಳನ್ನು ಗಣಿಸಬಲ್ಲವರಾರು !
ಸಮುದ್ರದಲ್ಲಿರುವ ರತ್ನಗಳನ್ನು ಎಣಿಸಬಲ್ಲವರಾರು !
ಶ್ರೀ ಪೂರ್ಣಪ್ರಜ್ಞರು ರಚಿಸಿದ ಗ್ರಂಥಗಳು ಅನಂತಾರ್ಥಗಳನ್ನು ಬೋಧಿಸುತ್ತವೆ.
ಚಿಂತಾಮಣಿಗಳಂತೆ ಸರ್ವಾಭೀಷ್ಟಗಳನ್ನೂ ಪ್ರದಾನ ಮಾಡಲು ಸಮರ್ಥವಾಗಿರುತ್ತವೆ.
ಶ್ರೀಮದಾಚಾರ್ಯರ ಶೈಲಿಯಲ್ಲಿ....
ಮಾತು - ಮಿತ.
ಅರ್ಥ - ಅಮಿತ.
ಅವುಗಳ ಭಾವ - ಗಂಭೀರ.
ಫಲ - ಪುರುಷಾರ್ಥ
ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರು ಶ್ರೀಮದಾಚಾರ್ಯರ ಎದುರು ಹಾಗೂ ಎಲ್ಲ ಜನರೆದುರು ಅವರ ಸರ್ವಮೋಲ್ಲ ಗ್ರಂಥಗಳ ಮಹಿಮೆಯನ್ನು ಬಣ್ಣಿಸಿ ಮತ್ತೆ ಶ್ರೀ ಸರ್ವಜ್ಞರಲ್ಲಿ ಬಿನ್ನವಿಸಿಕೊಂಡರು....
ಗುರುವರ್ಯರೇ, ತಾವು ಬರೆದ ಗ್ರಂಥಗಳೆಲ್ಲವೂ ಅತ್ಯಪೂರ್ವವಾಗಿದೆ. ಆದರೂ ನನಗಾಗಿ ತಾವು ಇನ್ನೊಂದು ಗ್ರಂಥವನ್ನು ಬರೆದು ಕರುಣಿಸಬೇಕು. ತಾವು ಈ ವರೆಗೂ ಬರೆದ ಗ್ರಂಥಗಳೆಲ್ಲವೂ

ಯುಕ್ತಿಜಾಲ ಜಟಿಲವಾಗಿ ಪ್ರಮಾಣ ಪ್ರಮೇಯಗಳಿಂದ ಖಚಿತ ನಿಚಿತವಾಗಿದ್ದರೂ
ಮಂದಮತಿಗಳಿಗೆ ಅದರಲ್ಲಿಯ ಯುಕ್ತಿಗಳನ್ನು ಗ್ರಹಿಸಲಿಕ್ಕಾಗುವುದುದಿಲ್ಲ.
ಅದಕ್ಕಾಗಿ ಸುಸ್ಪಷ್ಟವಾಗಿ, ಯುಕ್ತಿ - ಉಪನ್ಯಾಸವನ್ನು ಸುಲಲಿತ ಶೈಲಿಯಲ್ಲಿ ಸರಳವಾಗಿ
ತಿಳಿಯುವಂತೆ ಒಂದು ಗ್ರಂಥವನ್ನು ಬರೆಯಬೇಕು.
ಶಿಷ್ಯೋತ್ತಮರ ಈ ಬಿನ್ನಹವನ್ನು ಮನ್ನಿಸಿ ಶ್ರೀ ಸರ್ವಜ್ಞಾಚಾರ್ಯರು " ಅನುವ್ಯಾಖ್ಯಾನ " ಎಂಬ
ಮಹಾ ಗ್ರಂಥವನ್ನು ರಚಿಸಿದರು.
" ಅನುವ್ಯಾಖ್ಯಾನಾ " ವು....
ವಾದಿಗಳಿಗೆ ವಜ್ರ
ಮಾಯಾವಾದದ ಕತ್ತಲೆಗೆ ಚಂಡಕಿರಣ
ಶ್ರೀಮದಾಚಾರ್ಯರು ಈ ಗ್ರಂಥವನ್ನು ಬರೆಯಿಸಿದ ರೀತಿಯನ್ನು ಕೇಳಿದರೆ ನೇರಾಗೀ
ಬೆಪ್ಪಾಗುವಂತಿದೆ.
ನಾಲ್ಕು ಅಧ್ಯಾಯದ ಆ ಗ್ರಂಥವನ್ನು ಶ್ರೀ ಸರ್ವಜ್ಞರು ನಾಲ್ಕು ಜನ ಶಿಷ್ಯರನ್ನು ಕರೆದು ಏಕಕಾಲಕ್ಕೆ
ಒಬ್ಬೊಬ್ಬರಿಗೆ ಒಂದೊಂದು ಅಧ್ಯಾಯವನ್ನು ಹೇಳುತ್ತಾ ಬರೆದು ಮುಗಿಸಿಬಿಟ್ಟರು.
ಶ್ರೀಮದಾಚಾರ್ಯರ ಸರ್ವಜ್ಞತ್ವಕ್ಕೆ ಇನ್ನು ಬೇರೆ ಸಾಕ್ಷಿ ಏನು ಬೇಕು !
" ಶ್ರೀ ವಾಯುಸ್ತುತಿ ರಚನೆಯ ಹಿನ್ನೆಲೆ "
ಒಂದುದಿನ ಶ್ರೀಮದಾಚಾರ್ಯರು ಶ್ರೀ ಮೂಲರಾಮನನು, ಶ್ರೀ ಕೃಷ್ಣ, ವೇದವ್ಯಾಸ ದೇವರನ್ನು
ಪೂಜೆ ಮಾಡುತ್ತಲಿದ್ದರು.
ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರು ಅಲ್ಲಿಯೇ ಕುಳಿತು ಈ ಪೂಜಾ ಪ್ರಕಾರವನ್ನು
ನಿರೀಕ್ಷಿಸುತ್ತಿದ್ದರು.
ನೈವೇದ್ಯ ಸಮರ್ಪಣಾ ಕಾಲದದಲ್ಲಿ ಎಲ್ಲ ಶಿಷ್ಯರೂ ಗರ್ಭ ಗುಡಿಯಿಂದ ಹೊರಗಡೆ ಬಂದು ದ್ವಾದಶ
ಸ್ತೋತ್ರವನ್ನು ಪಾರಾಯಣ ಮಾಡುತ್ತಾ ನಿಂತುಕೊಂಡರು.
ಶ್ರೀ ಆನಂದತೀರ್ಥರು ಮಾತ್ರ ಬಾಗಿಲು ಹಾಕಿಕೊಂಡು ದೇವಾ ಪೂಜೆಯನ್ನು ನಡೆಸಿದ್ದರು.
ಹನ್ನೆರಡು ಅಧ್ಯಾಯ ದ್ವಾದಶ ಸ್ತೋತ್ರ ಪಾರಾಯಣ ಮುಗಿದರೂ ಗರ್ಭ ಗುಡಿಯ ಮುಚ್ಚಿದ ಕದ
ತೆಗೆಯಲೇ ಇಲ್ಲ. ಆಗ ಶ್ರೀ ಪಂಡಿತಾಚಾರ್ಯರು " ಏಕೆ ಇಷ್ಟು ವಿಲಂಬವಾಗುತ್ತದೆ " ಎಂದು
ಕುತೂಹಲಭರಿತರಾಗಿ ಬಾಗಿಲು ಸಂದಿಯಲ್ಲಿ ಇಣಿಕಿ ನೋಡಿದರು.

ಅಲ್ಲಿ ಅವರು ಕಂಡ ದೃಶ್ಯ ಆಶ್ಚರ್ಯಕಾರಕವಾಗಿದ್ದಿತು.
ಕಡಗೋಲು ಕೃಷ್ಣ, ಕೋದಂಡರಾಮ, ವೇದವ್ಯಾಸ ಮೂರು ಭಗವನ್ ಮೂರ್ತಿಗಳು ಪೀಠದಲ್ಲಿ ವಿರಾಜಿಸುತ್ತಲಿವೆ. ಅವರೆದುರು ಶ್ರೀ ಮಧ್ವಾಚಾರ್ಯರು ಹನುಮ - ಭೀಮ - ಮಧ್ವ ಈ ಮೂರು ರೂಪಗಳನ್ನು ತೆಗೆದುಕೊಂಡು ಈ ಮೂರು ಭಗವದ್ರೂಪಗಳನ್ನು ಭಕ್ತಿಯಿಂದ ಪೂಜಿಸುತ್ತಿದ್ದಾರೆ.
ಈ ದೃಶ್ಯವನ್ನು ಕಂಡು ಶ್ರೀ ಪಂಡಿತಾಚಾರ್ಯರಿಗೆ ಒಮ್ಮೆಲೇ ಆಶ್ಚರ್ಯ, ಆನಂದ, ಉದ್ವೇಗ, ಅಂಜಿಕೆ, ಉಲ್ಲಾಸ,ಭಕ್ತಿಭರ ಮುಂತಾದ ಬಗೆಬಗೆಯ ಭಾವೋದ್ರೇಕಗಳು ಉಕ್ಕಿ ಮಿಕ್ಕಿ ಅವರ ದೇಹವೆಲ್ಲವೂ ಪುಲಕಗೊಂಡಿತು.
ಶ್ರದ್ಧಾಭಾರದಿಂದ ಶರೀರವು ಆಕಂಪಿಸಿತು.
ಆನಂದ ಬಾಷ್ಪಗಳು ಕಣ್ಣುಗಳಿಂದ ಕೋಡಿಯೊಡಿದು ಹರಿಯ ತೊಡಗಿದವು.
ಅವರ ಕಂಠವು ಗದ್ಗದವಾಯಿತು.
ಅವರ ಹದಗೊಂಡ ಹೃದಯದಲ್ಲಿ ಮೂಡಿ ಮಿಕ್ಕಿದ ಭಕ್ತಿ ಆನಂದಾದಿ ಭಾವನೆಗಳ ಆವೇಶವು ಸದ್ಯಃ ಸ್ಫೂರ್ತಿಯಿಂದ ಕಾವ್ಯವಾಗಿ ಹಾರಿತು.
ಭಾವ ಗೀತೆಯಾಗಿ ಮೆರೆಯಿತು.
ಅಂದಿನ ಆ ಪರವಶತೆಯಲ್ಲಿ ಗುರು ಮಹಿಮೆಯನ್ನು ಕಂಡು ಸಂತಸಗೊಂಡ ಶ್ರೀ ಪಂಡಿತಾಚಾರ್ಯರ ಹೃದಯದಿಂದ ಹೊರಹೊಮ್ಮಿದ ಆ ಹಿಗ್ಗಿನ ಹಾಡೇ ಇಂದು " ವಾಯುಸ್ತುತಿ " ಎಂದು ಸುಪ್ರಸಿದ್ಧವಾಗಿದೆ.
ಅದರಲ್ಲಿ ರಾಮ ಕೃಷ್ಣ ವೇದವ್ಯಾಸರ ಸೇವಾ - ಶುಶ್ರೂಷೆಗಳಿಗಾಗಿ ಹನುಮ ಭೀಮ ಮಧ್ವರಾಗಿ ಅವರಾತ ಮಾಡಿದ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರ ದಿವ್ಯ ಮಹಿಮೆಯ ವಸ್ತುವಾಗಿ ಮೆರೆದಿದೆ.
" ಶ್ರೀ ನರಸಿಂಹ ನಖ ಸ್ತುತಿ "
ಈ ವಾಯುಸ್ತುತಿಯನ್ನು ಶ್ರ ಸರ್ವಜ್ಞರಿಗೆ ತಂದು ಸಮರ್ಪಿಸಿದಾಗ ಅದನ್ನು ನೋಡಿ ಶ್ರೀ ಆನಂದತೀರ್ಥರು ಆನಂದ ಪಟ್ಟರು.
ಆದರೆ ತಮ್ಮ ಸ್ತುತಿಯಿಂದಲೇ ಪ್ರಾರಂಭವಾಗುವ ಆ ಖಂಡ ಕಾವ್ಯವನ್ನು ಕಂಡು ಶ್ರೀಮದಾಚಾರ್ಯರ ಭಗವದ್ಭಕ್ತಿಗೆ ಇಂದು ಒಂದು ಕುಂದು ಎಂದು ತೋರಿತು.

ತಮ್ಮ ಸ್ತೋತ್ರಕ್ಕಿಂತ ಮೊದಲು ತಮ್ಮ ಗುರುವಾದ ಶ್ರೀ ಹರಿಯ ಪ್ರಾರ್ಥನಾ ರೂಪವಾದ ಮಂಗಳಾಚರಣವು ಇರುವುದು ಅತ್ಯಂತ ಅವಶ್ಯಕ ಎನಿಸಿತು ಅವರ ಆ ಭಗವನ್ನಿಷ್ಠವಾದ ಬುದ್ಧಿಗೆ. ಆದುದರಿಂದ ಅವರು ಕೂಡಲೇ ಶ್ರೀ ನರಸಿಂಹದೇವರ ಉಗುರಿನ ಬಣ್ಣನೆ ಮಾಡಿ ಎರಡು ಪದ್ಯಗಳನ್ನು ಬರೆದು ಆ ಖಂಡ ಕಾವ್ಯಕ್ಕೆ ಕಿರೀಟವನ್ನಾಗಿ ವಾಯುಸ್ತುತಿಯ ಪ್ರಾರಂಭದಲ್ಲಿ ಜೋಡಿಸಿದರು.

ಶ್ರೀಮದಾಚಾರ್ಯ ಕೃತ ಶ್ರೀ ನೃಸಿಂಹದೇವರ ಸ್ತೋತ್ರದೊಂದಿಗೆ ಪ್ರಾರಂಭವಾದ ಶ್ರೀ ಮುಖ್ಯಪ್ರಾಣದೇವರ ಮಹಾ ಮಹಿಮಾ ಪ್ರತಿಪಾದಕವಾದ ಈ ವಾಯುಸ್ತುತಿಯು ಇಂದಿಗೂ ವೈಷ್ಣವರಿಗೆಲ್ಲ ಒಂದು ತಾರಕ ಮಂತ್ರವಾಗಿದೆ.

ಭಕ್ತಿಯಿಂದ ಪಾರಾಯಣ ಮಾಡುವವರಿಗೆ ಬೇಕಾದ ಪುರುಷಾರ್ಥ ಕೊಡಬಲ್ಲ ದಿವ್ಯ ಮಂತ್ರವಾಗಿದೆ. ಶ್ರೀ ಭಾವಿಸಮೀರ ವಾದಿರಾಜರಂಥ ವಾಗ್ವಿಭೂತಿಗಳು ದಿವ್ಯ ಜ್ಞಾನೋದಯದ ಪರಮ ಸಿದ್ಧಿಯನ್ನು ಪಡೆದದ್ದು ಈ ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯ ಕೃತ ವಾಯುಸ್ತುತಿಯ ಪಾರಾಯಣ, ಪುರಶ್ಚರನ ಪ್ರಭಾವದಿಂದಲೇ.

ಈ ಮಾತನ್ನು ಅವರೇ ತಮ್ಮ ಗ್ರಂಥಗಳಲ್ಲಿ ಅನೇಕ ಬಾರಿ ಒಪ್ಪಿಕೊಂಡಿದ್ದಾರೆ.

ಶ್ರೀ ತ್ರಿವಿಕ್ರಮರ ವಾಗ್ವೈಭವಕ್ಕೆ ಇನ್ನೇನು ಸಾಕ್ಷಿ ಬೆಳು !!

Courtesy > ಗುರು ವಿಜಯ ಪ್ರತಿಷ್ಠಾನ

" ಸರ್ವ ಸಿದ್ಧಿಪದ - ಸರ್ವ ಇಷ್ಟಾರ್ಥಪ್ರದ ಶ್ರೀ ಮಧ್ವ ವಿಜಯವನ್ನು ಜಗತ್ತಿಗೆ ನೀಡಿದ ಶ್ರೀ ನಾರಾಯಣ ಪಂಡಿತಾಚಾರ್ಯರ ಆರಾಧನಾ ಮಹೋತ್ಸವ "

ಮಾಘ ಶುದ್ಧ ಪೌರ್ಣಿಮಾ ಭಾನುವಾರ - ಶ್ರೀಮದಾಚಾರ್ಯರ ಪ್ರೀತಿಯ ಶಿಷ್ಯರಾದ ಶ್ರೀ ನಾರಾಯಣ ಪಂಡಿತಾಚಾರ್ಯರ ಆರಾಧನಾ ಮಹೋತ್ಸವ., ಕಾವು ಮಠ., ".

ಹೆಸರು : ಶ್ರೀ ನಾರಾಯಣ ಪಂಡಿತಾಚಾರ್ಯರು

ತಂದೆ : ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರು

ಕಾಲ : ಕ್ರಿ ಶ 1290 - 1370

ಶ್ರೀಮದಾಚಾರ್ಯರ ಜೀವನದ ಬೇರೆ ಬೇರೆ ಘಟನೆ ಸಂದರ್ಭ ಸನ್ನಿವೇಶಗಳನ್ನು ಬಲ್ಲಂಥ - ನೋಡಿದಂಥ ಅಥವಾ ಅದರಲ್ಲಿ ಭಾಗವಹಿಸಿದಂತ ಅನೇಕ ಗುರು ಹಿರಿಯರ ಬಾಯಿಂದ ಕೇಳಿದ್ದೇನೆ ಮತ್ತು ಒಂದೊಂದು ಘಟನೆಯನ್ನು ಅನೇಕ ಜನರ ಬಾಯಿಂದ ಕೇಳಿ ಅದನ್ನು ಸತ್ಯದ

ಒರೆಗಲ್ಲಿಗೆ ಹಚ್ಚಿ ನೋಡಿ ಅದು ಅತ್ಯಂತ ಪ್ರಾಮಾಣಿಕ ಎಂದು ನನ್ನ ಬುದ್ಧಿಗೆ ಸ್ಪಷ್ಟವಾಗಿ ತಿಳಿದ ಬಳಿಕವೇ ಆ ವಿಷಯವನ್ನು ಈ ಗ್ರಂಥದಲ್ಲಿ ನಾನು ಕಾಣಿಸಿದ್ದೇನೆ.

ಹೇಳುವವರಲ್ಲಿಯೇ ಭಿನಾಭ್ಪ್ರಾಯವಾದರೆ ಅವುಗಳಲ್ಲಿ ಪ್ರಬಲ - ದುರ್ಬಲ ವಿಚಾರಿಸಿ ಎರಡನ್ನೂ ತೂಗಿ ನೋಡಿ ಬಹು ಜನ ಸಂವಾದದಿಂದ " ಸತ್ಯಸ್ಯ ಸತ್ಯಂ " ಎಂದು ತೋರಿದ ವೃತ್ತಗಳನ್ನೇ ನಾನು ಇಲ್ಲಿ ಬಿತ್ತರಿಸಿದ್ದೇನೆ.

ಇದು ಬರೀ ಕಾವ್ಯವೆಂದು ಅಥವಾ ಗುರುಗಳ ಕೀರ್ತಿಯನ್ನು ಸಾರುವ ಪ್ರಬಂಧವೆಂದು ಅಥವಾ ಕಲ್ಪನೆಯಿಂದ ಏನಾದರೂ ಸರಸ ಸುಂದರವಾಗಿ ಹೇಳ ಬಹುದಾದ ಕಥಾನಕವೆ ಎಂದುಯಾರೂ ಶಂಕಿಸಕೂಡದು.

ಇದರಲ್ಲಿ ಹೇಳಿದ್ದು ಅಪ್ಪಟ ಸತ್ಯ.

ವಸ್ತುತಸ್ತು ನಡೆದ " ಇತ್ಥಂಭೂತ " ಸಂಗತಿಯನ್ನೇ ನಾನು ಹತ್ತು ಮೂಲಗಳಿಂದ ಸಂಗ್ರಹಿಸಿ - ವಿಚಾರಿಸಿ - ಪ್ರಾಮಾಣಿಕತೆಯ ನಿಕಷದಲ್ಲಿ ಪರಿಕಿಸಿ ಹದಿನಾರಾಣೆ ಸತ್ಯವೆಂದು ಖಾತರಿಯಾದ ಬಳಿಕವೇ ಅಂಥಾ ವಾಸ್ತವಿಕ ವಿಷಯಗಳನ್ನು ಮಾತ್ರ ಇಲ್ಲಿ ಬರೆದಿದ್ದೇನೆ ಎಂದು ಹೇಳಿದ್ದಾರೆ.

ಶ್ರೀಮದಾನಂದತೀರ್ಥ ಭಾಗವತ್ಪಾದರಂಥ ವಿಶ್ವತೋಮುಖ ಜೀವನವುಳ್ಳ 0ತಹ ವ್ಯಕ್ತಿಗಳ ಸಮಗ್ರ ಬಾಳಿನ ಚಾರು ಚರಿತ್ರೆಯನ್ನು ಇಡಿಯಾದ ಯಾವುದೇ ಒಬ್ಬ ಸಮಕಾಲೀನ ವ್ಯಕ್ತಿಗೆ ನೋಡಿ ತಿಳಿದುಕೊಳ್ಳುವುದು ಶಕ್ಯವಿಲ್ಲ.

ಆದುದರಿಂದ ಆ ಆ ಘಟನೆಗಳು ನಡೆದ ಸ್ಥಳದಲ್ಲಿ - ಆ ಸಮಯದಲ್ಲಿ ಅಲ್ಲಿ ಇದ್ದ ಪ್ರತ್ಯಕ್ಷ ದರ್ಶಿಗಳ ಹೇಳಿಕೆ - ಕೇಳಿಕೆಗಳಿಂದಲೇ ಆ ಆ ವಿಷಯಗಳನ್ನು ತಿಳಿದುಕೊಂಡು ಎಂಥಾ ಸಮಕಾಲೀನನಾದರೂ ಬರೆಯಬೇಕಾಗುತ್ತದೆ.

ಶ್ರೀ ನಾರಾಯಣ ಪಂಡಿತಾಚಾರ್ಯರು ಶ್ರೀ ಸರ್ವಜ್ಞರ ಸಮಕಾಲೀನರಾದ ತಮಗೆ ದೂರ ದೂರ ದೇಶಗಳಲ್ಲಿ - ಬೇರೆ ಬೇರೆ ಕಾಲಗಳಲ್ಲಿ ನಡೆದ ಘಟನೆಗಳೆಲ್ಲವೂ ಸಾಮಾನ್ಯವಾಗಿ ಗೊತ್ತಿದ್ದರೂ ಅಷ್ಟರ ಮೆಲಿಯೇ ಅವಲಂಬಿಸದೆ ಆ ಸ್ಥಳಗಳಿಗೆ ಹೋಗಿ ಅಲ್ಲಿದ್ದ ಪ್ರತ್ಯಕ್ಷ ದರ್ಶಿಗಳನ್ನು ಕಂಡು ಅವರನ್ನು ವಿಚಾರಿಸಿ....

ಮಯಾ ದೃಷ್ಟಾ ಧ್ರುವಮಿತಿ

ಪ್ರೋಕ್ತಾ: ಪ್ರಾಯೇಣ ಪುರುಶೈ: ।।

ಸುಮಧ್ವ ವಿಜಯ ಕಾವ್ಯವನ್ನು ಅವರು ತಾವು ನೋಡಿದ್ದಕ್ಕಿಂತ ಹೆಚ್ಚಾಗಿ ತಮ್ಮ ತಂದೆಯಿಂದಲೂ ಅಧೀಕೃತವಾದ ಸತ್ಯ ಸಂಗತಿಗಳನ್ನೆಲ್ಲ ತಿಳಿದುಕೊಂಡು " ಸುಮಧ್ವವಿಜಯ " ವನ್ನು ಬರೆದಿದ್ದಾರೆ. ಶ್ರೀ ನಾರಾಯಣ ಪಂಡಿತಾಚಾರ್ಯರು ಶ್ರೀ ಸುಮಧ್ವವಿಜಯವಲ್ಲದೆ ಅನೇಕ ಕಾವ್ಯ ಶಾಸ್ತ್ರ ಪ್ರಬಂಧಗಳನ್ನು ರಚಿಸಿದ್ದಾರೆ. ಅವುಗಳಲ್ಲಿ...

" ಶ್ರೀ ನಾರಾಯಣ ಪಂಡಿತಾಚಾರ್ಯ ಕೃತ ಗ್ರಂಥ ರತ್ನಗಳು "

1. ಸುಮಧ್ವ ವಿಜಯ [10 ಸರ್ಗಗಳು]
2. ಸುಮಧ್ವ ವಿಜಯ ಭಾವ ಪ್ರಕಾಶಿಕಾ
3. ಅಣು ಮಧ್ವ ವಿಜಯ [ಪ್ರಮೇಯ ನವ ಮಾಲಿಕಾ - 32 ಶ್ಲೋಕಗಳು]
4. ಮಣಿಮಂಜರೀ
5. ನಯಚಂದ್ರಿಕಾ [ಅನುವ್ಯಾಖ್ಯಾನ ಟೀಕಾ]
6. ತತ್ತ್ವಮಂಜರೀ [ವಿಷ್ಣುತತ್ತ್ವ ನಿರ್ಣಯ ಟೀಕಾ]
7. ಯಮಕಭಾರತ ಟೀಕಾ
8. ಅಣುಭಾಷ್ಯ ಟೀಕಾ
9. ಕೃಷ್ಣಾಮೃತ ಮಹಾರ್ಣವ ಟೀಕಾ
10. ಮಿಥ್ಯಾತ್ವಾನುಮಾನ ಖಂಡನ ಟೀಕಾ
11. ಸಂಗ್ರಹ ರಾಮಾಯಣ [3000 ಶ್ಲೋಕಗಳು]
12. ಶುಭೋದಯ ಕಾವ್ಯ [503 ಶ್ಲೋಕಗಳು]
13. ಪಾರಿಜಾತ ಹರಣಂ [3 ಸರ್ಗಗಳು]
14. ಯೋಗದೀಪಿಕಾ [ಸದಾಚಾರ ಗ್ರಂಥ - 10 ಪಟಲಗಳಲ್ಲಿ]
15. ನರಸಿಂಹ ಸ್ತುತಿ [21 ಶ್ಲೋಕಗಳು]
16. ರಾಮಗೀತಾಷ್ಟಕ
17. ದಾಶರಥ್ಯಷ್ಟಕ
18. ಕೃಷ್ಣಮಾಲಾ ಸ್ತೋತ್ರ
19. ಮಧ್ವ ಕವಚ
20. ಅಣು ವಾಯುಸ್ತುತಿ

21. ಶಿವ ಸ್ತುತಿ [13 ಶ್ಲೋಕಗಳು]

22. ತಾರತಮ್ಯ ಸ್ತೋತ್ರ [ದೇವತಾ ತಾರತಮ್ಯ]

23. ಮಧ್ವಾಮೃತ ಮಹಾರ್ಣವ

24. ಅಂಶಾವತಾರ

[ದೇವತೆಗಳ ಮತ್ತು ದೈತ್ಯ / ಅಸುರರ ಅಂಶ - ಆವೇಶ - ಅವತಾರಗಳ ವಿವರ]

ಮೊದಲಾದವುಗಳು ಪ್ರಮುಖವಾಗಿವೆ.

ಅವರ ಭಾವ ಪ್ರಕಾಶಿಕಾ ಟಿಪ್ಪಣಿಯಿಂದ ಸುಮಧ್ವ ವಿಜಯದಲ್ಲಿ ನಿರ್ದೇಶಿಸಿದ ಶ್ರೀಮದಾಚಾರ್ಯರ ಜೀವನ ಚರಿತ್ರದಲ್ಲಿಯ ಅನೇಕ ಘಟನೆಗಳ ಸ್ಥಾನಗಳನ್ನು ಭೌಗೋಲಿಕ ಸನ್ನಿವೇಶಗಳನ್ನೂ ಮತ್ತು ಸಂಸ್ಕೃತ ಶಬ್ದಗಳಿಗೆ ಸಮಾನಾರ್ಥಕ ತುಳು ಭಾಷೆಯ ಶಬ್ದಗಳನ್ನು ತಿಳಿಯಲಿಕ್ಕೂ - ಅವುಗಳ ಸಹಾಯದಿಂದ ಇಂದು ಅವುಗಳ ವಿಶಿಷ್ಟ ಸ್ಥಿತಿ ಗತಿಯನ್ನು ಗುರುತಿಸಲಿಕ್ಕೂ ಬಹಳ ಉಪಯೋಗವಾಗಿದೆ.

ಶ್ರೀ ನಾರಾಯಾಣ ಪಂಡಿತಾಚಾರ್ಯರು ಜಗತ್ತಿಗೆಲ್ಲ ಶ್ರೀಮದಾಚಾರ್ಯರ ದಿವ್ಯ ಜೀವನದ ದಿಗ್ದರ್ಶನ ಮಾಡಿಸಿದ ಪುಣ್ಯಾತ್ಮರು.

ಅವರು ಸುಮಧ್ವ ವಿಜಯ ಗ್ರಂಥವನ್ನು ಬರೆಯದೆ ಇದ್ದಿದ್ದರೆ ಗುರುಗಳ ಜೀವನದ ಪಾವನ ಚರಿತ್ರೆಯು ಯಾರಿಗೂ ಗೊತ್ತಾಗದೆ...

ಇಡಮಂಧಂ ಜಗತ್ ಕೃತ್ಸ್ನಂ

ಜಾಯೇತ ಭುವನ ತ್ರಯಂ ॥

ಎಂಬ ವಚನದಂತೆ ಜಗತ್ತೆಲ್ಲವೂ ಕತ್ತಲೆಯಲ್ಲಿಯೇ ಕೊಳೆಯಬೇಕಾಗುತ್ತಿತ್ತು..

ಶ್ರೀ ಸರ್ವಜ್ಞರ ವಿರಾಡ್ ಜೀವನದ ದಿವ್ಯ ದರ್ಶನವನ್ನು ಹದಿನಾರು ಸರ್ಗದ ಈ ಮಹಾ ಕಾವ್ಯದಲ್ಲಿ ಮೂಡಿಸಿದ - ಜನರಿಗೆಲ್ಲ ಮಾಡಿಸಿದ - ಶ್ರೀ ನಾರಾಯಣ ಪಂಡಿತಾಚಾರ್ಯರ ಉಪಕಾರವು ಮಾಧ್ವರಿಗೆಲ್ಲ ಚಿರ ಸ್ಮರಣೀಯವಾಗಿದೆ.

ಶ್ರೀ ನಾರಾಯಣ ಪಂಡಿತಾಚಾರ್ಯರ ಕಾವ್ಯ ಕೌಶಲವು ಅನ್ಯಾದೃಶವಾಗಿದೆ.

ಚತುರನಾದ ಚಿತ್ರಕಾರನು ಚಿಕ್ಕ ಕಾಗದದ ತುಂಡಿನಲ್ಲಿ ಉನ್ನತೋನ್ನತವಾದ ಹೈಮಾಚಲದ ಶೈಲಾ ಶ್ರೇಣಿಗಳನ್ನೆಲ್ಲ ಚಿತ್ರಿಸಿ ತೋರಿಸುವಂತೆ ಶ್ರೀ ನಾರಾಯಣ ಪಂಡಿತಾಚಾರ್ಯರು ಶ್ರೀ ಸರ್ವಜ್ಞಾಚಾರ್ಯರ ಬಾಣಗಳವಾದ ಬದುಕಿನ ವಿರಾಡ್ ದರ್ಶನವನ್ನು ಹರಿನಾರು ಸರ್ಗದ ಈ

ಮಹಾಕಾವ್ಯದಲ್ಲಿ ವೈವಿಧ್ಯಮಯವಾಗಿ ಮೂಡಿಸಿದ್ದು ಅವರ ಕವಿತ್ವ ಸಿದ್ಧಿಯ ಕೌಶಲದ ಕಳಸವಾಗಿದೆ.

ಶ್ರೀ ನಾರಾಯಣ ಪಂಡಿತಾಚಾರ್ಯರ ಈ " ಸುಮಧ್ವ ವಿಜಯ ಮಹಾಕಾವ್ಯ " ವು ಪ್ರಾಮಾಣಿಕತೆಯ ಒರೆಗಲ್ಲಿಗೂ ಇಲಿಯ ಬಹುದಾದ ಚೊಕ್ಕ ಚೆನ್ನದಂಥ ಸತ್ಯ ಶುದ್ಧವಾದ - ಪ್ರಮಾಣ ಬದ್ಧವಾದ ರಸವತ್ ಕೃತಿಯಾಗಿದೆ.

ಇಂಥಾ ಮಹಾ ವಿಭೂತಿಯ ಬೃಹಜ್ಜೀವನದ ದೇದೀಪ್ಯಮಾನವಾದ ದಿವ್ಯ ದರ್ಶನವನ್ನು ಮಧುರ ಕೋಮಲ ಕಾಣ್ತಾ ಪದಾವಲಿಗಳಲ್ಲಿ ಪ್ರಸನ್ನ ವರ್ಣ ಪುಂಜಗಳಿಂದ ರಸ ರಂಜಿನಿಯಾಗಿ ಸುಂದರ ಶೈಲಿಯಲ್ಲಿ ಮೂಡಿಸಿದ್ದಕ್ಕಾಗಿ ಶ್ರೀ ನಾರಾಯಣ ಪಂಡಿತಾಚಾರ್ಯರಿಗೆ ಸಹೃದಯ ಪ್ರಪಂಚವೆಲ್ಲವೂ ಋಣಿಯಾಗಿ ಇರಬೇಕಾಗಿದೆ.

ಶ್ರೀ ನಾರಾಯಣ ಪಂಡಿತಾಚಾರ್ಯರು ಶ್ರೀಮದಾಚಾರ್ಯರ ಹಾಗೂ ತಮ್ಮ ತಂದೇವರ ಅನಂತರ ಮಂಗಳೂರಿನ ದಕ್ಷಿಣಕ್ಕೆ ಕುಂಬಳೆ ಗ್ರಾಮದ ಹತ್ತಿರ ಇರುವ ತಮ್ಮ ಕಾವು ,ಅಥದಲ್ಲಿಯೇ ಇದ್ದು ಶ್ರೀ ಸರ್ವಜ್ಞಾಚಾರ್ಯರ ಗ್ರಂಥಗಳ ಪಾಠ ಪ್ರವಚನ, ಟೀಕಾ ಲೇಖನ, ಗ್ರಂಥ ರಚನೆ, ಪೂಜೆ ಪುರಸ್ಕಾರಗಳನ್ನು ಮಾಡಿಕೊಂಡು ವಾಸವಾಗಿದ್ದರು.

ತಮ್ಮ ತಂದೆ ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರಿಗೆ ಶ್ರೀಮದಾಚಾರ್ಯರು ದಯಪಾಲಿಸಿದ ಶ್ರೀ ಶ್ರೀಕರ ವಿಗ್ರಹವನ್ನು ದಿನವೂ ಭಕ್ತಿಯಿಂದ ಪೂಜೆ ಮಾಡುತ್ತಿದ್ದರು.

ಶ್ರೀ ಸರ್ವಜ್ಞರ ಸಾಕ್ಷಾದ್ದರ್ಶನದ ಸೌಭಾಗ್ಯವನ್ನು ಪಡೆದು ಅವರ ಸಾಕ್ಷಾತ್ ಶಿಷ್ಯರಾದ ತಮ್ಮ ತಂದೆಯವರಿಂದ ಶ್ರೀ ಮಧ್ವ ದರ್ಶನದ ದಿವ್ಯ ಜ್ಞಾನವನ್ನು ಪಡೆದು ಧನ್ಯರಾದ ಶ್ರೀ ನಾರಾಯಣ ಪಂಡಿತಾಚಾರ್ಯರಿಗೆ ವಯಸ್ಸು ಆದಂತೆ...

ಮನವು ಮಾಗಿತು.

ವೈರಾಗ್ಯದೆಡೆಗೆ ಬಾಗಿತು.

ಸಂಸಾರದಲ್ಲಿ ಜಿಗುಪ್ಸೆ ಮೂಡಿತು.

ಅವರ ತಂದೆಯವರಾದ ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರೂ ವಾರ್ಧಕ್ಯದಲ್ಲಿ ವಿರಕ್ತರಾಗಿ ಯತ್ಯಾಶ್ರಮವನ್ನು ಸ್ವೀಕರಿಸಿದ್ದರು.

ಅದರಂತೆ ಶ್ರೀ ನಾರಾಯಣ ಪಂಡಿತಾಚಾರ್ಯರೂ ವಯಸ್ಸಾದಂತೆ....

ಭವ ಬಂಧನದ ಬೇಡಿಗಳನ್ನೆಲ್ಲ ಕಳಚಿದರು.

ಸಾಂಸಾರಿಕ ಸ್ನೇಹ ಎಳೆ - ತೊಳೆಗಳನ್ನೆಲ್ಲ ಹರಿದು ಹಾಕಿದರು.

ಧನ - ಕನಕಗಳನ್ನು ತೊರೆದರು.

ಮಡದಿ ಮಕ್ಕಳನ್ನು ಮರೆತರು.

ಸರ್ವಸಂಗವನ್ನು ಪರಿತ್ಯಾಗ ಮಾಡಿ ಸಂನ್ಯಾಸಿಗಳಾಗಿ ಶ್ರೀ ನಾರಾಯಣ ತೀರ್ಥರಾದರು.

ಈ ಪರಮ ಹಂಸಾಶ್ರಮದಿಂದಲೇ ಪರಮಾತ್ಮನ ಸೇವೆ ಮಾಡಿ ಕೃತಾರ್ಥರಾದರು.

Courtesy > ಗುರು ವಿಜಯ ಪ್ರತಿಷ್ಠಾನ


ಹಾಗೂ ಮಧ್ವರ ಜೀವನ ಚರಿತ್ರೆಯನ್ನು ಮತ್ತು ಅನೇಕ ಗ್ರಂಥಗಳನ್ನು
ಬರೆದಿಟ್ಟ ಮಧ್ವರ ಸಮಕಾಲೀನರಾದ ನಾರಾಯಣ ಪಂಡಿತಾಚಾರ್ಯರ
ಆರಾಧನೆಯ ಶುಭಾಶಯಗಳು
ವಂದೇ ಲಿಕುಚಸಂಜಾತಂ ಶ್ರೀನಾರಾಯಣಪಂಡಿತಮ್ ।
ಯೋಽಪಾಯಯತ್ ಸುಧೀವ್ರಾತಂ ಶ್ರೀಮಧ್ವಚರಿತಾಮೃತಮ್ ॥
ಮಧ್ವಾನಂದದಮಧ್ವಾನಂ ದರ್ಶಯಾಮಾಸ ದರ್ಶನಮ್ ।
